بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 19

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

21 ಮೇ 2020, 21 ಹಿಜ್ರತ್ 1399 ಹಿಜರಿ ಶಮ್‌ಸಿ,
27 ರಮಝಾನ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಮೇ 15, 2020 ಶುಕ್ರವಾರದ ದಿವಸ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೆಬ್(ಅಬಿಅ) ರವರ ಆರೋಗ್ಯವು ಉತ್ತಮವಾಗಿರದ ಕಾರಣ ಖುತ್‌ಬ ಜುಮುಆ (ಶುಕ್ರವಾರದ ಪ್ರವಚನ) ನೀಡಲಿಲ್ಲ.

ಹುಝೂರ್ ಅನ್ವರ್(ಅಬಿಅ) ರವರ ಕ್ಷೇಮಕ್ಕಾಗಿ, ದೀರ್ಘಾಯಸ್ಸಿಗಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ಅವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್.

## ಅಲ್ಲಾಹನ ಉಪದೇಶ

وَاٰتُوا النِّسَآءَ صَدُقٰتِهِنَّ نِحْلَةً ؕ فَاِنْ طِبْنَ لَكُمْ عَنْ شَیْءٍ مِّنْهُ نَفْسًا فَكُلُوْهُ هَنِیْٓـًٔا مَّرِیْٓـًٔا ○

*(ಅನ್ನಿಸಾಅ್: 05)*

ಅಂದರೆ: ಸ್ತ್ರೀಯರಿಗೆ ಅವರ ವಿವಾಹಧನ (ಮಹರ್)ವನ್ನು ಆತ್ಮ ಸಂತೋಷದಿಂದ ನೀಡಿರಿ. ನಂತರ, ಅವರು ಸ್ವಿಚ್ಛೆಯಿಂದ ಅದರಿಂದೇನಾದರೂ ನಿಮಗೆ ಬಿಟ್ಟುಕೊಟ್ಟರೆ, ಅದನ್ನು ನೀವು ಸಂತೋಷದಿಂದ ಅನುಭೋಗಿಸಿರಿ.

**ರಮಝಾನಿನ ಈ ಕೊನೆಯ ಹತ್ತು ದಿನಗಳಲ್ಲಿ ಅಲ್ಲಾಹನ ಮುಂದೆ ಮೊದಲಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪ್ರಾರ್ಥನೆಗಳನ್ನು ಮಾಡಿರಿ. ಅಲ್ಲಾಹನಲ್ಲಿ ಅವನ ಕರುಣೆ ಹಾಗೂ ಅನುಗ್ರಹಗಳನ್ನು ಯಾಚಿಸಿರಿ. ಅಲ್ಲಾಹನು ಪ್ರತಿಯೊಂದು ಅಹ್ಮದಿಯವರಿಗೆ ಈ ಕುರಿತು ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲಿ. ಆಮೀನ್**

# ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರ ಆರೋಗ್ಯದ ವಿವರ

ದಿನಾಂಕ 15–05–2020 ಶುಕ್ರವಾರ ದಿವಸ ಸಯ್ಯದುನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರು ಖುತ್‌ಬ ಜುಮುಅ ನೀಡಲಿಲ್ಲ. ಆ ಸಂದರ್ಭದಲ್ಲಿ ಅವರು ಎಲ್ಲಾ ಜಮಾಅತ್ತಿನ ಸದಸ್ಯರಿಗೆ ಒಂದು ಸಂದೇಶವನ್ನು ಕಳುಹಿಸಿದರು. ಆ ಸಂದೇಶವನ್ನು ಹುಝೂರ್ ಅನ್ವರ್‌ರವರ ಪ್ರೈವೆಟ್ ಸೆಕ್ರೇಟರಿ ಆದ ಮುನೀರ್ ಅಹ್ಮದ್ ಜಾವೇದ್ ಸಾಹೇಬರು ಎಂ.ಟಿ.ಎ ಮುಖಾಂತರ ಜಮಾಅತ್ತಿನ ಸದಸ್ಯರ ಮುಂದೆ ಪ್ರಸ್ತುತ ಪಡಿಸಿದರು.

ಹುಝೂರ್ ಅನ್ವರ್(ಅತಬ) ರವರು ಹೇಳಿದರು:

ಇಂದು ನಾನು ಖುತ್‌ಬ ಜುಮುಅ ನೀಡಲು ಸಾಧ್ಯವಾಗುವುದಿಲ್ಲ ಎಂದು ವಿಷಾಧವಿದೆ. ಏಕೆಂದರೆ ಕಳೆದ ಕೆಲವು ದಿವಸಗಳ ಹಿಂದೆ ನಾನು ಮನೆಯ ಅಂಗಳದಲ್ಲಿ ನಡೆಯುತ್ತಿದ್ದಾಗ ಚಾಪೆಯ ಮೇಲೆ ಕಾಲು ಎಡವಿ ಜಾರಿದೆ. ಅದರ ಪರಿಣಾಮವಾಗಿ ನನ್ನ ಮೂಗು ಮತ್ತು ಹಣೆಗೆ ಸ್ವಲ್ಪ ಗಾಯವಾಗಿವೆ. ಆದ್ದರಿಂದ ಖುತ್‌ಬ ಜುಮುಅ ನೀಡಲು ಕಷ್ಟವಿದೆ. ಇದಲ್ಲದೆ ವೈದ್ಯರು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಮುಂದಿನ ಶುಕ್ರವಾರ ನಾನು ಖುತ್‌ಬ ಜುಮುಅ ನೀಡಲು ಸರ್ವಶಕ್ತನಾದ ಅಲ್ಲಾಹನು ಸಂಪೂರ್ಣ ಚೇತರಿಕೆ ನೀಡುವಂತೆ ಪ್ರಾರ್ಥಿಸಿರಿ. **ಇನ್‌ಶಾಅಲ್ಲಾಹ್**.

ಇದಲ್ಲದೆ ನಾವು ಈಗ ಪವಿತ್ರ ರಮಝಾನ್ ಮಾಸದ ಕೊನೆಯ ಹತ್ತು ದಿನಗಳಲ್ಲಿದ್ದೇವೆ. ಈ ದಿನಗಳಲ್ಲಿ ಜಮಾಅತ್ತಿಗೋಸ್ಕರವು ದುಆ ಮಾಡಿರಿ. ಸರ್ವಶಕ್ತನಾದ ಅಲ್ಲಾಹನು ಜಮಾಅತ್ತನ್ನು ಎಲ್ಲಾ ರೀತಿಯ ದುಷ್ಟ ಮತ್ತು ಕಿಡಿಗೇಡಿತನಗಳಿಂದ ರಕ್ಷಿಸಲಿ. ಪಾಕಿಸ್ತಾನದಲ್ಲಿ ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳು ಮತ್ತು ಮಾಧ್ಯಮಗಳು ಜಮಾಅತ್ತಿನ ಬಗ್ಗೆ ತಮ್ಮ ವಿರೋಧ ಮತ್ತು ದ್ವೇಶವನ್ನು ತೀವ್ರಗೊಳಿಸಿವೆ. ಅವರು ಅಲ್ಲಾಹ್ ಹಾಗೂ ರಸೂಲುಲ್ಲಾಹ್ ಸಲ್ಲಲ್ಲಹು ಅಲೈಹಿವಸಲ್ಲಮರ ಹೆಸರಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅಹ್ಮದಿಯರನ್ನು ವಿಶೇಷವಾಗಿ ಗುರಿ ಮಾಡಲಾಗುತ್ತಿದೆ ಮತ್ತು ಈ ವಿರೋಧದ ಕೇಂದ್ರಬಿಂದುವಾಗಿದೆ. ಈ ರಾಜಕೀಯ ಆಟಗಳ ಹಾನಿಕಾರಕ ಪರಿಣಾಮಗಳಿಂದ ಸರ್ವಶಕ್ತನಾದ ಅಲ್ಲಾಹನು ಇಡೀ ಜಮಾಅತ್ತನ್ನು ರಕ್ಷಿಸಲಿ. ಅದೇನೇ ಇದ್ದರೂ, ಅವರ ಇಂತಹ ಎಲ್ಲಾ ದಾಳಿಗಳನ್ನು ಸರ್ವಶಕ್ತನಾದ ಅಲ್ಲಾಹನ ಮುಂದೆ ಸಲ್ಲಿಸುವ ಮೂಲಕ ಪ್ರಾರ್ಥನೆಯೊಂದಿಗೆ ಉತ್ತರಿಸುವುದು ನಮ್ಮ ಕರ್ತವ್ಯವಾಗಿದೆ. ರಮಝಾನಿನ ಈ ಕೊನೆಯ ಹತ್ತು ದಿನಗಳಲ್ಲಿ ಅಲ್ಲಾಹನ ಮುಂದೆ ಮೊದಲಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪ್ರಾರ್ಥನೆಗಳನ್ನು ಮಾಡಿರಿ. ಅಲ್ಲಾಹನಲ್ಲಿ ಅವರ ಕರುಣೆ ಹಾಗೂ ಅನುಗ್ರಹಗಳನ್ನು ಯಾಚಿಸಿರಿ. ಅಲ್ಲಾಹನು ಪ್ರತಿಯೊಂದು ಅಹ್ಮದಿಯವರಿಗೆ ಈ ಕುರಿತು ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲಿ. **ಆಮೀನ್**

ಅನಂತರ ಡಾ॥ ಶಬ್ಬೀರ್ ಅಹ್ಮದ್ ಭಟ್ಟಿ ಸಾಹೆಬರು ಹುಝೂರ್ ಅನ್ವರ್(ಅಬಿಅ) ರವರ ವೈದ್ಯಕೀಯ ವರದಿಯನ್ನು ಮಂಡಿಸಿದರು:

ಡಾ॥ ಸಾಹೆಬ್ ಹೇಳಿದರು: ಹುಝೂರ್ ಅನ್ವರ್(ಅಬಿಅ) ರವರು ಬೀಳುವ ಸಮಯದಲ್ಲಿ ಹಣೆ ಮತ್ತು ಮೊಣ ಕಾಲುಗಳಿಗೆ ಸಣ್ಣ ಗಾಯಗಳಾಗಿವೆ. ಅಲ್ಲಾಹನ ಕೃಪೆಯಿಂದ ಇವೆಲ್ಲವೂ ಹೊರ ಗಾಯಗಳಾಗಿದ್ದು ಆಳವಾದ ಯಾವುದೇ ಗಾಯಗಳಿಲ್ಲ. ಹಣೆಯ ಸುತ್ತಲೂ ಸ್ವಲ್ಪ swelling ಆಗಿದೆ ಅದು ಕ್ರಮೇಣ ಕಡಿಮೆಯಾಗುತ್ತಿದೆ. ಇನ್‌ಶಾಅಲ್ಲಾಹ್ ಸಂಪೂರ್ಣ ಚೇತರಿಕೆ ನಿರೀಕ್ಷಿಸಲಾಗಿದೆ. ಹುಝೂರ್(ಅಬಿಅ) ರವರು ನೊವಿಲ್ಲದೆ ಆರಾಮವಾಗಿ ನಡೆದಾಡುತ್ತಿದ್ದಾರೆ. ಅದಲ್ಲದೆ ಹುಝೂರ್ ಅವರ ಆರೋಗ್ಯವು ಉತ್ತಮವಾಗಿದೆ. **ಅಲ್‌ಹಮ್‌ದುಲಿಲ್ಲಾಹ್**. ಕೆಲವು ದಿನಗಳ ಕಾಲ ವಿಶ್ರಾಂತಿ ಪಡೆಯಬೇಕೆಂದು ಮತ್ತು ಈ ವಾರ ಖುತ್‌ಬ ಜುಮುಅ ನೀಡಬಾರದೆಂದು ಹುಝೂರ್ ಅವರ ಬಳಿ ವಿನಮ್ರ ವಿನಂತಿಯನ್ನು ಮಾಡಲಾಯಿತು. ಈ ವಿನಂತಿಯನ್ನು ಹುಝೂರ್(ಅಬಿಅ) ರವರು ಸ್ವೀಕರಿಸಿದ್ದಾರೆ. **ಜಝಾಕುಮುಲ್ಲಾಹ್**

## ಹುಝೂರ್ ಅನ್ವರ್(ಅಬಿಅ) ರವರ ಆರೋಗ್ಯದ ಬಗ್ಗೆ ಡಾ॥ ಶಬ್ಬೀರ್ ಅಹ್ಮದ್ ಭಟ್ಟಿ ಸಾಹೆಬ್‌ರವರ ಇತ್ತೀಚಿನ ವರದಿ. (17–05–2020, ಭಾನುವಾರ)

ಅಲ್ಲಾಹನ ಅನುಗ್ರಹದಿಂದ ಹುಝೂರ್ ಅನ್ವರ್(ಅಬಿಅ) ರವರ ಆರೋಗ್ಯವು ಇಂದು ಬಹಳ ಉತ್ತಮವಾಗಿದೆ. ಗಾಯಗಳ ನೋವಿನಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿದೆ ಮತ್ತು ಅವರ ಹಣೆ, ಮೂಗು ಹಾಗೂ ಮೊಣಕಾಲುಗಳಿಗೆ ಆದ ಗಾಯಗಳು ಸಂಪೂರ್ಣವಾಗಿ ಗುಣವಾಗುತ್ತಿವೆ. **ಅಲ್‌ಹಮ್ದುಲಿಲ್ಲಾಹ್**. ಹುಝೂರ್ ಅನ್ವರ್(ಅಬಿಅ) ರವರು ತಮ್ಮ ಕಚೇರಿಯ ಎಲ್ಲಾ ಪತ್ರವ್ಯವಹಾರಗಳು ಪರಿಶೀಲಿಸುತ್ತಿದ್ದಾರೆ ಹಾಗೂ ಎಲ್ಲಾ ಸದಸ್ಯರಿಗಾಗಿ ಪ್ರಾರ್ಥಿಸುತ್ತಿದ್ದಾರೆ. ಜಮಾಅತ್ತಿನ ಎಲ್ಲಾ ಸದಸ್ಯರೂ ಸಹ ಹುಝೂರ್(ಅಬಿಅ) ಅವರಿಗಾಗಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತಾ ಇರಿ. ಸರ್ವಶಕ್ತನಾದ ಅಲ್ಲಾಹನು ತನ್ನ ಅನುಗ್ರಹದಿಂದ ಹುಝೂರ್(ಅಬಿಅ) ಗೆ ಸಂಪೂರ್ಣ ಹಾಗೂ ತ್ವರಿತ ಚೇತರಿಕೆ ನೀಡಲಿ. ಇದರಿಂದಾಗಿ ಜಮಾಅತ್ತಿನ ಸದಸ್ಯರು ಮುಂದಿನ ಶುಕ್ರವಾರ ತಮ್ಮ ಪ್ರೀತಿಯ ಇಮಾಮರನ್ನು ಕಾಣುವಂತಾಗಲಿ.

ಎಲ್ಲಾ ಜಮಾಅತ್ತಿನ ಸದಸ್ಯರು ಹುಝೂರ್ ಅನ್ವರ್(ಅಬಿಅ) ರವರ ಯೋಗಕ್ಷೇಮಕ್ಕಾಗಿ ದುಆ ಮಾಡುತ್ತಾ ಇರಿ.

اَللّٰھُمَّ رَبَّ النَّاسِ، اَذْھِبِ الْبَاْسَ، اِشْفِ اَنْتَ الشَّافِیْ لَا شِفَاءَ اِلَّا شِفَاءُکَ، شِفَاءً لَّا یُغَادِرُ سَقَمًا

# ಖುತ್‌ಬ ಜುಮುಅ

**ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ವರದಿ ಮಾಡುತ್ತಾರೆ; ನನ್ನ ಮಾತು ಆಲಿಸಿದ ಕೂಡಲೆ ಆ ಹುಡುಗರಿಬ್ಬರೂ ತಮ್ಮ ಖಡ್ಗ ಹಿಡಿದು ಅಬೂಜಹಲನ ಕಡೆಗೆ ನೆಗೆದು ಅವನನ್ನು ಖಡ್ಗಗಳಿಂದ ಕಡಿದು ಹಾಕಿ ಕೊಂದು ಬಿಟ್ಟರು. ಅಬೂಜಹಲ್ ಮಣ್ಣು ಪಾಲಾದನು. ಅವರ ಈ ಆಕಸ್ಮಿಕ ಆಕ್ರಮಣವನ್ನು ಜನರು ನೋಡುತ್ತಲೇ ನಿಂತುಕೊಂಡರು.**

**ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಿಷ್ಠಾವಂತ ಬದರಿ ಸಹಾಬಿ ಹಝ್ರತ್ ಮುಆಝ್ ಬಿನ್ ಹಾರಿಸ್(ರ) ಅವರ ಪ್ರಸ್ತಾವನೆ**

**ಖಿಲಾಫತ್ತಿನ ಪ್ರೇಮಿ, ನಿಷ್ಠಾವಂತ ವ್ಯಕ್ತಿ, ಬಹಳ ಧೈರ್ಯವಂತ, ಕಲಿಮವನ್ನು ರಕ್ಷಿಸಿಕೊಳ್ಳುವವರು, ಅಸೀರಾನೆ ರಾಹೆ ಮೌಲಾ(ಅಲ್ಲಾಹನ ಮಾರ್ಗದ ಕೈದಿ), ಅಮಲ ಹಿಫಾಝತೆ ಖಾಸ್ ವಿಭಾಗದಲ್ಲಿ ಗಾರ್ಡ್ ಆಗಿ ಸೇವೆ ಸಲ್ಲಿಸಿದ ಮಾನ್ಯ ರಾನಾ ನಯೀಮುದ್ದೀನ್ ಸಾಹೆಬ್‌ರವರ ಮೃತರ ಗುಣಲಕ್ಷಣಗಳ ಪ್ರಸ್ತಾವನೆ.**

**"ನಾನು ಯಾವಾಗಲೂ ಅವರ ಚಹರೆಯ ಮೇಲೆ ಸಹನೆ ಹಾಗೂ ಖಲೀಫರೊಂದಿಗೆ ಪ್ರೀತಿ ಕಂಡಿದ್ದೇನೆ."**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17-04-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ
اَلْحَمْدُ لِلّٰهِ رَبِّ الْعَالَمِينَ۔ اَلرَّحْمٰنِ الرَّحِيمِ۔ مٰلِكِ يَوْمِ الدِّينِ۔
إِيَّاكَ نَعْبُدُ وَإِيَّاكَ نَسْتَعِينُ۔ اِهْدِنَا الصِّرَاطَ الْمُسْتَقِيمَ۔
صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ۔

ಈ ದಿನ ಬದರಿ ಸಹಾಬರಲ್ಲಿ ಒಬ್ಬರಾದ ಹಝ್ರತ್ ಮುಆಝ್ ಬಿನ್ ಹಾರಿಸ್(ರ) ರವರ ಬಗ್ಗೆ ವಿವರಿಸುವೆನು. ಹಝ್ರತ್ ಮುಆಝ್(ರ) ರವರು ಅನ್ಸಾರ್‌ಗಳ ಖಝ್‌ರಜ್ ಗೋತ್ರದ ಬನೂ ಮಾಲಿಕ್ ಬಿನ್ ನಜ್ಜಾರ್ ಗೋತ್ರಕ್ಕೆ ಸೇರಿದ್ದರು. ಅವರ ತಂದೆಯ ಹೆಸರು ಹಾರಿಸ್ ಬಿನ್ ರಫಾಅ ಮತ್ತು ತಾಯಿಯ ಹೆಸರು ಉಫ್‌ರಾಹ್ ಬಿನ್ತ್ ಉಬೈದ್. ಹಝ್ರತ್ ಮುಅವ್ವಿಝ್(ರ) ಹಾಗೂ ಹಝ್ರತ್ ಔಫ್(ರ) ಅವರ ಸಹೋದರರಾಗಿದ್ದರು. ಈ ಮೂರು ಸಹೋದರರು ತನ್ನ ತಂದೆಯಲ್ಲದೆ ತಾಯಿಯ ಕಡೆಯು ಸಂಬಂಧಿಸಲಾಗುತ್ತದೆ ಇವರನ್ನು ಬನೂ ಅಫ್‌ರಾಅ ಎಂದು ಸಹ ಹೇಳಲಾಗುತ್ತದೆ. ಹಝ್ರತ್ ಮುಆಝ್(ರ) ತನ್ನ ಇಬ್ಬರು ಸಹೋದರರಾದ ಹಝ್ರತ್ ಔಫ್ ಮತ್ತು ಹಝ್ರತ್ ಮುಅವ್ವಿಝ್‌ರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರ ಈ ಇಬ್ಬರು ಸಹೋದರರು ಬದರ್ ಯುದ್ಧದಲ್ಲಿ ಶಹೀದರಾದರು. ಆದರೆ ಹಝ್ರತ್ ಮುಆಝ್ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು. ಒಂದು ವರದಿಯ ಪ್ರಕಾರ ಹಝ್ರತ್ ಮುಆಝ್ ಬಿನ್ ಹಾರಿಸ್(ರ) ಮತ್ತು ಹಝ್ರತ್ ರಾಫೆ ಬಿನ್ ಮಾಲಿಕ್ ಝುರಾಖಿ(ರ) ರವರು ರಸೂಲುಲ್ಲಾಹ್(ಸ) ಅವರ ಮೇಲೆ ಮಕ್ಕದಲ್ಲಿ ಪ್ರಾರಂಭದ ಕಾಲದಲ್ಲಿ ಮುಸ್ಲಿಮರಾದ ಜನರಲ್ಲಿ ಸೇರಿದ್ದರು. ಮತ್ತು ಹಝ್ರತ್ ಮುಆಝ್(ರ) ಬೈಅತೆ ಅಖಬ ಊಲಾ ಸಂದರ್ಭದಲ್ಲಿ ಮಕ್ಕದಲ್ಲಿ ಮುಸ್ಲಿಮರಾದ ಎಂಟು ಜನರಲ್ಲಿ ಹಝ್ರತ್ ಮುಆಝ್ ಒಬ್ಬರಾಗಿದ್ದರು. ಬೈಅತೆ ಅಖಬ ಸಾನಿಯದಲ್ಲಿಯೂ ಅವರು ಉಪಸ್ಥಿತರಿದ್ದರು. ಹಝ್ರತ್ ಮಮಾರ್ ಬಿನ್ ಹಾರಿಸ್(ರ) ಮಕ್ಕದಿಂದ ಹಿಜ್ರತ್ ಮಾಡಿ ಮದೀನಕ್ಕೆ ಬಂದಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರ ಮತ್ತು ಹಝ್ರತ್ ಮುಆಝ್ ಬಿನ್ ಹಾರಿಸ್(ರ) ರವರ ನಡವೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು.

(ಉಸದುಲ್‌ಗಾಬ ಸಂಪುಟ-5, ಪುಟ-190-191, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-374, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಅಬೂ ಜಹಲ್‌ನ ಹತ್ಯೆಯ ಬಗ್ಗೆ ಹಿಂದಿನ ವರ್ಷದ ಒಂದು ಖುತ್‌ಬದಲ್ಲಿ ವಿವರಿಸಲಾಗಿತ್ತು. (ಖುತ್‌ಬ ಜುಮುಅ 5-04-2019, ಅಲ್‌ಫಝಲ್ ಇಂಟರ್‌ನ್ಯಾಶ್ನಲ್ 26-04-2019) ಆದರೂ ಇಲ್ಲಿಯು ಸಹ ವಿವರಿಸುವೆನು. ಇದು ಸಹ ಅವಶ್ಯಕವಾಗಿದೆ ಏಕೆಂದರೆ ಹಝ್ರತ್ ಮುಆಝ್(ರ) ರವರ ಸಂಬಂಧವು ಇದರಿಂದ ಇದೆ. ಮತ್ತು ಈಗ ನಾನು ವಿವರಿಸುವ ವರದಿಯು ಬುಖಾರಿಯ ವರದಿ ಆಗಿದೆ.

ಸಾಲಿಹ್ ಬಿನ್ ಇಬ್ರಾಹೀಮ್ ತನ್ನ ತಾತ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರಿಂದ ವರದಿ ಮಾಡುತ್ತಾರೆ. ಅವರು ಹೇಳಿದರು: ನಾನು ಬದರ್ ಯುದ್ಧದ ಸಂದರ್ಭದಲ್ಲಿ ಸೈನಿಕರ ಸಾಲಿನಲ್ಲಿ ನಿಂತಿದ್ದಾಗ ನನ್ನ ಎಡ ಬಲಗಳ ಕಡೆಗೆ ನೋಡಿದೆನು. ನನ್ನ ಎಡ ಬಲಗಳಲ್ಲಿ ಅನ್‌ಸಾರಿ ಹುಡುಗರು ನಿಂತಿದ್ದರು. ಅವರ ಪ್ರಾಯ ಚಿಕ್ಕದಾಗಿತ್ತು. ನನ್ನೊಂದಿಗೆ ಇವರಿಗಿಂತ ಬಲಿಷ್ಠರಾದ ಯುವಕರು ನಿಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಯೋಚಿಸಿದೆ. ಅಷ್ಟರಲ್ಲಿ ಒಬ್ಬ ಹುಡುಗ ತನ್ನ ಕೈಯಿಂದ ನನ್ನನ್ನು ಒತ್ತಿ ಕೇಳಿದನು. ಚಾಚ, ತಾವು ಅಬುಜಹಲನನ್ನು ಗುರುತಿಸಬಲ್ಲಿರಾ? ನಾನು ಹೇಳಿದೆ ನನಗೆ ಅವನೊಂದಿಗೆ ಏನು ಕೆಲಸವಿದೆ? ಆ ಹುಡುಗ ಹೇಳಿದ: "ಅಬೂಜಹಲ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುತ್ತಿದ್ದನು ಎಂದು ನಾನು ಕೇಳಿರುವೆನು. ನಾನು ಅವನನ್ನು ನೋಡಿದರೆ ನಮ್ಮಿಬ್ಬರಲ್ಲಿ ಯಾರ ಜೀವಿತ ಕಾಲ ಮುಂದಾಗಿ ವಿಧಿಸಲ್ಪಟ್ಟಿದೆಯೋ ಅವನು ಮೃತನಾಗುವ ತನಕ ನನ್ನ ಕಣ್ಣುಗಳು ಅವನಿಂದ ದೂರ ಸರಿಯಲಾರದು." ಆಗ ನನಗೆ ಆಶ್ಚರ್ಯವಾಯಿತು. ಇನ್ನೊಬ್ಬ ಹುಡುಗ ಸಹ ಅದೇ ರೀತಿ ಕೇಳಿದನು. ಅಷ್ಟರೊಳಗೆ ಅಬೂಜಹಲನು ಜನರ ಮಧ್ಯೆ ತಿರುಗಾಡುತ್ತಾ ಇರುವುದಾಗಿ ಕಂಡೆನು. ಆಗ ನಾನು ಹೇಳಿದೆ ನೀವು ಯಾರ ಬಗ್ಗೆ ವಿಚಾರಿಸುತ್ತಿರುವಿರೋ ಅವನೇ ಆತ. ನನ್ನ ಮಾತು ಆಲಿಸಿದ ಕೂಡಲೆ ಆ ಹುಡುಗರಿಬ್ಬರೂ ತಮ್ಮ ಖಡ್ಗ ಹಿಡಿದು ಅಬೂಜಹಲನ ಕಡೆಗೆ ನೆಗೆದು ಅವನನ್ನು ಖಡ್ಗಗಳಿಂದ ಕಡಿದು ಹಾಕಿ ಕೊಂದು ಬಿಟ್ಟರು. ಅನಂತರ ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದು ಆ ವಿಷಯ ತಿಳಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು:

ನಿಮ್ಮಿಬ್ಬರಲ್ಲಿ ಅವನನ್ನು ಕೊಂದವನು ಯಾರು? ಅವರಿಬ್ಬರೂ ನಾನು ಎಂದು ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀವು ನಿಮ್ಮ ಖಡ್ಗಗಳನ್ನು ಒರಸಿ ಸ್ವಚ್ಛಗೊಳಿಸಿರುವಿರೋ? ಅವರು ಹೇಳಿದರು: ಇಲ್ಲ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಡ್ಗಗಳನ್ನು ನೋಡಿದರು. ಅವರು ಹೇಳಿದರು: ನೀವಿಬ್ಬರೂ ಅಬೂಜಹಲನನ್ನು ಕೊಂದಿರುವಿರಿ. ಮತ್ತೆ ಹೇಳಿದರು ಅವನ ಸಂಪತ್ತು ಮುಆಝ್ ಬಿನ್ ಉಮ್ರೋ ಬಿನ್ ಜಮೂಹ್‌ಗೆ ಸಿಗುವುದು. ಅವರಿಬ್ಬರ ಹೆಸರು ಮುಆಝ್ ಆಗಿತ್ತು. ಮುಆಝ್ ಬಿನ್ ಅಫ್‌ರಾ ಮತ್ತು ಮುಆಝ್ ಬಿನ್ ಉಮ್ರೋ ಬಿನ್ ಜಮೂಹ್ ಆಗಿತ್ತು ಇದು ಸಹೀಹ್ ಬುಖಾರಿಯ ವರದಿ ಆಗಿದೆ. (ಸಹೀಹ್ ಬುಖಾರಿ, ಕಿತಾಬ್ ಫರ್‌ಝುಲ್ ಖುಮ್ಸ್, ಹದೀಸ್–3141)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಬದರ್ ಯುದ್ಧದ ದಿವಸ ಹೇಳಿದರು: ಅಬೂಜಹಲ್‌ನ ಪರಿಸ್ಥಿತಿ ಏನಾಗಿದೆ ಎಂದು ಯಾರು ನೋಡಿಕೊಂಡು ಬರುವರು? ಹಝ್ರತ್ ಇಬ್ನೆ ಮಸ್‌ಊದ್(ರ) ಹೋಗಿ ನೋಡಿದರು ಅವನನ್ನು ಅಫ್‌ರಾನ ಇಬ್ಬರು ಪುತ್ರರು ಹಝ್ರತ್ ಮುಆಝ್(ರ) ಹಾಗೂ ಹಝ್ರತ್ ಮುಅವ್ವಿಝ್(ರ) ಅವರಿಬ್ಬರು ತಮ್ಮ ಖಡ್ಗದಿಂದ ಕಡಿದ ಕಾರಣ ಅವನು ಮರಣಾಸನ್ನನಾಗಿದ್ದನು. ಹಝ್ರತ್ ಇಬ್ನೆ ಮಸ್‌ಊದ್(ರ) ಕೇಳಿದರು: ನೀನು ಅಬೂ ಜಹಲ್ ಅಲ್ಲವೇ? ಹಝ್ರತ್ ಇಬ್ನೆ ಮಸ್‌ಊದ್(ರ) ಹೇಳೂತ್ತಾರೆ ಅವರು ಅಬೂಜಹಲ್‌ನ ಗಡ್ಡ ಹಿಡಿದಿದ್ದರು. ಅಬೂಜಹಲ್ ಹೇಳಿದನು: ನೀವು ನನಗಿಂತ ಶ್ರೇಷ್ಠನಾದ ಯಾರನ್ನು ಕೊಂದಿಲ್ಲ. ಅಹ್ಮದ್ ಬಿನ್ ಯುನುಸ್(ರ) ತಮ್ಮ ವರದಿಯಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ: ಹಝ್ರತ್ ಅಬ್‌ದುಲ್ಲಾ ಬಿನ್ ಮಸ್‌ಊದ್(ರ) ಹೀಗೆ ಹೇಳಿದರು ನೀನೇ ಅಬೂಜಹಲ್ ಆಗಿದ್ದೀಯ? ಇದು ಸಹ ಬುಖಾರಿಯ ವರದಿ ಆಗಿದೆ. (ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ, ಬಾಬ್ ಖತಲ್ ಅಬೂ ಜಹಲ್ ಹದೀಸ್–3962)

ಬುಖಾರಿಯ ಈ ವರದಿಯ ವ್ಯಾಖ್ಯಾನದಲ್ಲಿ ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹೆಬ್(ರ) ಬರೆಯುತ್ತಾರೆ:

ಕೆಲವು ವರದಿಗಳ ಪ್ರಕಾರ ಇಖ್‌ರಾನ ಇಬ್ಬರು ಪುತ್ರರಾದ ಮುಆಝ್ ಹಾಗೂ ಮುಅವ್ವಿಝ್ ಅವರಿಬ್ಬರು ಅಬೂಜಹಲ್‌ನನ್ನು ಮೃತ್ಯುವಿಗೆ ಸಮೀಪಗೊಳಿಸಿದರು. ಅನಂತರ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅಬೂಜಹಲ್‌ನ ಶಿರವನ್ನು ದೇಹದಿಂದ ಬೇರ್ಪಡಿಸಿದರು. ಅಲ್ಲಾಮ ಇಬ್ನೆ ಹಜರ್ ಅಸ್‌ಖಲಾನಿರವರು ಹೇಳುತ್ತಾರೆ: ಮುಆಝ್ ಬಿನ್ ಉಮ್ರೊ ಮತ್ತು ಮುಆಝ್ ಬಿನ್ ಇಫ್ರಾ ನಂತರ ಮುಅವ್ವಿಝ್ ಬಿನ್ ಇಫ್ರಾ ಸಹ ಅಬೂಜಹಲ್‌ನನ್ನು ಅಕ್ರಮಿಸಿರಬಹುದು. (ಸಹೀಹ್ ಬುಖಾರಿ ಕಿತಾಬ್ ಫರ್‌ಝುಲ್ ಶಮ್ಸ್, ಸಂಪುಟ–5, ಪುಟ–491 ಅಡಿ ಟಿಪ್ಪಣಿ, ಉರ್ದು ಅನುವಾದ ಪ್ರಕಾಶಕರು ನಝಾರತ್ ಇಶಾಅತ್ ರಬ್ವಾ)

ಬದರ್ ಯುದ್ಧದ ಸಂದರ್ಭದಲ್ಲಿ ಅಬೂಜಹಲ್‌ನ ಹತ್ಯೆಯಲ್ಲಿ ಯಾರು ಯಾರು ಭಾಗಿಯಾಗಿದ್ದರು ಎಂಬುದರ ಬಗ್ಗೆ ಹೀಗೆ ವಿವರ ಲಭ್ಯವಾಗಿರುತ್ತದೆ.

ಬಿನ್ ಹಶ್ಶಾಮ್‌ರವರು ಅಲ್ಲಾಮ ಇಬ್ನೆ ಇಸ್ಹಾಖ್ ರವರಿಂದ ವರದಿ ಮಾಡುತ್ತಾರೆ ಮುಆಝ್ ಬಿನ್ ಉಮ್ರೊ ಬಿನ್ ಜಮೂಹ್(ರ) ರವರು ಅಬೂ ಜಹಲ್‌ನ ಕಾಲು ಕತ್ತರಿಸಿದಾಗ ಆತನು ಕೆಳಗೆ ಬಿದ್ದನು. ಇಕ್ರಮ ಬಿನ್ ಅಬೂಜಹಲ್ ಹಝ್ರತ್ ಮುಆಝ್(ರ) ರವರ ಕೈಮೇಲೆ ಖಡ್ಗದಿಂದ ಹೊಡೆದಾಗ ಅವರ ಕೈ ಭುಜದಿಂದ ಬೇರ್ಪಟ್ಟಿತು. ಅನಂತರ ಮುಅವ್ವಿಝ್ ಬಿನ್ ಅಫ್‌ರಾ(ರ) ರವರು ಅಬೂಜಹಲ್‌ನ ಮೇಲೆ ಆಕ್ರಮಿಸಿದರು ಆಗ ಆತನು ಕೆಳಗೆ ಬಿದ್ದನು. ಅವನಲ್ಲಿ ಸ್ವಲ್ಪ ಜೀವ ಉಳಿದಿತ್ತು ಆಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ರವರು ಆತನ ರುಂಡವನ್ನು ಆತನ ದೇಹದಿಂದ ಬೇರ್ಪಡಿಸಿದರು. ಪ್ರವಾದಿ(ಸ) ರವರು ಅಬೂ ಜಹಲ್‌ನನ್ನು ಹುಡುಕಲು ಆದೇಶಿಸಿದಾಗ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅವರ ರುಂಡವನ್ನು ಅವನ ದೇಹದಿಂದ ಬೇರ್ಪಡಿಸಿದರು. ಸಹೀಹ್ ಮುಸ್ಲಿಮ್ ಹದೀಸ್‌ನ ಪ್ರಕಾರ ಅಫ್‌ರಾನ ಇಬ್ಬರು ಪುತ್ರರು ಅಬೂಜಹಲ್‌ನ ಮೇಲೆ ಆಕ್ರಮಿಸಿ ಅವನನ್ನು ಕೊಂದುಹಾಕಿದ್ದರು. ಅದೇ ರೀತಿ ಬುಖಾರಿಯಲ್ಲಿ ಬಾಬ್ ಖತಲ್ ಅಬಿಜಹಲ್‌ನಲ್ಲಿಯು ಸಹ ಹೀಗೆ ವರದಿ ಆಗಿದೆ. ಇಮಾಮ್ ಖುರ್‌ತಬಿ ಅವರ ಪ್ರಕಾರ ಇದು ಊಹೆ ಆಗಿದೆ. ಅಂದರೆ ಅಫ್‌ರಾನ ಇಬ್ಬರು ಪುತ್ರ ಅಬೂಜಹಲ್‌ನನ್ನು ಕೊಂದು ಹಾಕಿದ್ದು ಊಹೆ ಆಗಿದೆ. ಅವರು ಹೇಳುತ್ತಾರೆ ಕೆಲವು ವರದಿಗಾರರಿಗೆ ಮುಆಝ್ ಬಿನ್ ಉಮ್ರೊ ಬಿನ್ ಜಮೂಹ್(ರ) ದಲ್ಲಿ ಸಂಶಯ ಹುಟ್ಟಿತ್ತು ಅಂದರೆ ಮುಆಝ್ ಬಿನ್ ಅಫ್‌ರಾ(ರ) ಅವರ ಬದಲು ಮುಆಝ್ ಬಿನ್ ಉಮ್ರೊ ಬಿನ್ ಜಮೂಹ್(ರ) ಆಗಿದ್ದರು ಅವರನ್ನು ಜನರು ಮುಆಝ್ ಬಿನ್ ಅಫ್‌ರಾ(ರ) ಎಂದು ತಿಳಿದು ಕೊಂಡರು. ಹೇಳುತ್ತಾರೆ ಮುಆಝ್ ಬಿನ್ ಉಮ್ರೊ ಜಮೂಹ್(ರ) ಮುಆಝ್ ಬಿನ್ ಅಫ್‌ರಾ(ರ) ರವರೊಂದಿಗೆ ಸಂದೇಹಾಸ್ಪದಗೊಂಡರು. ಅಲ್ಲಾಮ ಇಬ್ನುಲ್ ಜೌಝಿ ಹೇಳುತ್ತಾರೆ ಮುಆಝ್ ಬಿನ್ ಜಮೂಹ್(ರ), ಅಫ್‌ರಾನ ಸಂತತಿಯಲ್ಲಿರಲಿಲ್ಲ ಮತ್ತು ಮುಆಝ್ ಬಿನ್ ಅಫ್‌ರಾ(ರ) ಅಬೂಜಹಲ್‌ನ ಕೊಲೆ ಮಾಡುವವರಲ್ಲಿದ್ದನು. ಮುಆಝ್ ಬಿನ್ ಅಫ್‌ರಾನ ಯಾವುದಾದರು ಸಹೋದರನೋ ಅಥವಾ ಚಿಕ್ಕಪ್ಪನೋ ಆ ಸಂದರ್ಭದಲ್ಲಿದ್ದಿರ ಬಹುದು. ಅಥವಾ ವರದಿಯಲ್ಲಿ ಇಫ್‌ರಾನ ಓರ್ವ ಪುತ್ರನ ಉಲ್ಲೇಖವಿದ್ದಿರಬಹುದು ವರದಿಗಾರರಿಂದ ತಪ್ಪಿನಿಂದ ಎರಡು ಪುತ್ರರು ಎಂದು ಹೇಳಿರಬಹುದು. ಏನೇ ಇರಲಿ ಅಬು ಉಮರ್ ಹೇಳುತ್ತಾರೆ. ಈ ವರದಿಯಲ್ಲಿ ಹಝ್ರತ್ ಅನಸ್ ಬಿನ್ ಮಾಲಿಕ್(ರ) ರವರ ಹದೀಸ್ ಸರಿಯಾಗಿದೆ. ಅದರಲ್ಲಿ ಇಬ್ನೆ ಇಫ್‌ರಾ ಅಬೂಜಹಲ್‌ನನ್ನು ಹತ್ಯೆ ಮಾಡಿದ್ದನು ಅಂದರೆ ಅಫ್‌ರಾನ ಓರ್ವ ಪುತ್ರ ಆಗಿದ್ದನು. ಇಬ್ನೆ ತೀನ್ ಹೇಳುತ್ತಾರೆ: ಈ ವಿಷಯದಲ್ಲಿ ಸಂಭಾವನೀಯತೆ ಇದೆ ಇಬ್ಬರು ಮುಆಝ್(ರ) ಅಂದರೆ ಮುಆಝ್ ಬಿನ್ ಉಮ್ರೊ ಬಿನ್ ಜಮೂಹ್(ರ) ಹಾಗೂ ಮುಆಝ್ ಬಿನ್ ಅಫ್‌ರಾ(ರ) ರವರು ತಾಯಿಯ ಕಡೆಯಿಂದ ಸಹೋದರರಾಗಿದ್ದರು. ಅಲ್ಲಾಮ ದಾವೂದಿ ಅವರು ಅಫ್‌ರಾರವರ ಇಬ್ಬರು ಪುತ್ರರು ಸಹಲ್ ಮತ್ತು ಸುಹೈಲ್ ಎಂದು ತಿಳಿದಿದ್ದಾರೆ. ಇವರಿಬ್ಬರು ಮುಅವ್ವಿಝ್ ಹಾಗೂ ಮುಆಝ್ ಎಂದು ಹೇಳಲಾಗುತ್ತದೆ. (ಉಮ್‌ದತುಲ್ ಖಾರಿ, ಸಂಪುಟ–15, ಪುಟ–100–101, ದಾರುಲ್ ಫಿಕರ್ ಬೈರೂತ್)

ಹೀಗೆ ಈ ವರದಿಗಳು ದೊರಕಿವೆ ಮೂರು ಜನರು ಮೃತಗೊಳಿಸಿದ್ದಾರೆ ಎಂದು. ಕೆಲವರು ಇಬ್ಬರು ಎಂದು ಅದರಲ್ಲಿ ಹಝ್ರತ್ ಮುಆಝ್ ಬಿನ್ ಹಾರಿಸ್(ರ) ರವರ ಪ್ರಸ್ತಾವನೆ ಸಿಗುತ್ತದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ರವರು ಬದರ್ ಯುದ್ಧದ ಘಟನೆಗಳನ್ನು ಬರೆದಿದ್ದಾರೆ ಅದರಲ್ಲಿ ಅಬೂಜಹಲ್‌ನ ಹತ್ಯೆಯ ಘಟನೆಯು ಹೀಗೆ ದೊರಕುತ್ತದೆ:

"ಯುದ್ಧದ ಮೈದಾನದಲ್ಲಿ ರಕ್ತಪಾತದ ಮೈದಾನವು ಬಿಸಿ ಆಗಿತ್ತು. ಮುಸ್ಲಿಮರ ಮುಂದೆ ಅವರಿಗಿಂತ ಮೂರು ಪಟ್ಟು ಹೆಚ್ಚು ಜನರಿದ್ದರು." ಆ ಮೂರು ಪಟ್ಟು ಜನರು "ಅವರು ಪ್ರತಿಯೊಂದು ರೀತಿಯಲ್ಲಿ ಯುದ್ಧದ ಆಯುಧಗಳನ್ನು ಹೊಂದಿ ಇಸ್ಲಾಮನ್ನು ನಶಿಸಬೇಕೆಂಬ ಗುರಿ ಸಾಧಿಸಿ ಮೈದಾನಕ್ಕೆ ಇಳಿದಿದ್ದರು. ಮುಸ್ಲಿಮರ ಸಂಖ್ಯೆಯು ಬಹಳ ಕಡಿಮೆ ಆಗಿತ್ತು, ಆಯುಧಗಳು ಇರಲಿಲ್ಲ, ಬಡರು, ವಲಸೆಗಾರರು ತಮ್ಮ ದುಃಖದಲ್ಲಿ ಮುಳುಗಿದ್ದರು. ಅವರು ಬಾಹ್ಯವಾಗಿ ಮಕ್ಕದವರ ಮುಂದೆ ಕೆಲವೇ ಕ್ಷಣದಲ್ಲಿ ನಶಿಸುವಂತಹವರಾಗಿದ್ದರು ಆದರೆ ಏಕದೇವಾರಾಧನೆ ಹಾಗೂ ಪ್ರವಾದಿಯ ಪ್ರೀತಿಯು ಅವರನ್ನು ಪ್ರಮತ್ತನಾಗಿಸಿತ್ತು ಮತ್ತು ಲೋಕದಲ್ಲಿ ಹೆಚ್ಚು ಬಲವಂತವಾಗಿದ್ದ ವಿಷಯವೂ ಅವರನ್ನು ಹೆಚ್ಚು ಬಲಿಷ್ಠನಾಗಿಸಿತ್ತು ಅಂದರೆ ಈಮಾನ್ (ವಿಶ್ವಾಸವು) ಅವರಲ್ಲಿ ಅಸಾಮಾನ್ಯ ಶಕ್ತಿ ತುಂಬಿತ್ತು. ಅವರು ಆ ಸಂದರ್ಭದಲ್ಲಿ ಯುದ್ಧದ ಮೈದಾನದಲ್ಲಿ ಧರ್ಮ ಸೇವೆಯ ಆ ನಮೂನೆಯು ತೋರಿಸುತ್ತಿದ್ದರೆ ಅವರ ಉದಾಹರಣೆ ನಾವು ಎಲ್ಲೂ ಕಾಣಲು ಸಾಧ್ಯವಿಲ್ಲ. ಪ್ರತಿಯೊಬ್ಬನು ಇನ್ನೊಬ್ಬನ ಮುಂದೆ ಸಾಗುತ್ತಿದ್ದನು ಮತ್ತು ಅಲ್ಲಾಹನ ಮಾರ್ಗದಲ್ಲಿ ಜೀವ ಅರ್ಪಿಸಲು ಸಿದ್ಧವಾಗಿದ್ದನು. ಹಮ್‌ಝ(ರ), ಅಲಿ(ರ) ಮತ್ತು ಝುಬೈರ್(ರ) ಅವರು ಶತ್ರುಗಳ ಅನೇಕ ಪಂಕ್ತಿಯನ್ನು ನಾಶ ಮಾಡಿದ್ದರು. ಅನ್ಸಾರ್‌ಗಳ ನಿಷ್ಠೆಯ ಹುರುಪು ಹೇಗಿತ್ತೆಂದರೆ ಅಬ್ದುರ್ರಹ್ಮಾನ್ ಬಿನ್ ಔಫ್(ರ) ವರದಿ ಮಾಡುತ್ತಾರೆ ಯುದ್ಧ ಪ್ರಾರಂಭವಾಗುತ್ತಿರುವಾಗ ನಾನು ಬದರ್ ಯುದ್ಧದ ಸಂದರ್ಭದಲ್ಲಿ ಸೈನಿಕರ ಸಾಲಿನಲ್ಲಿ ನಿಂತಿದ್ದಾಗ ಎಡ ಬಲಗಳ ಕಡೆಗೆ ನೋಡಿದೆನು. ನನ್ನ ಎಡ ಬಲಗಳಲ್ಲಿ ಅನ್‌ಸಾರಿ ಹುಡುಗರು ನಿಂತಿದ್ದರು. ಅವರ ಪ್ರಾಯ ಚಿಕ್ಕದಾಗಿತ್ತು. ನನ್ನೊಂದಿಗೆ ಇವರಿಗಿಂತ ಬಲಿಷ್ಠರಾದ ಯುವಕರು ನಿಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಯೋಚಿಸಿದೆ. ಅಷ್ಟರಲ್ಲಿ ಒಬ್ಬ ಹುಡುಗ ತನ್ನ ಕೈಯಿಂದ ನನ್ನನ್ನು ಒತ್ತಿ ಕೇಳಿದನು. ಚಾಚ, ತಾವು ಅಬುಜಹಲನನ್ನು ಗುರುತಿಸಬಲ್ಲಿರಾ? ನಾನು ಹೇಳಿದೆ ನಿನಗೆ ಅವನೊಂದಿಗೆ ಏನು ಕೆಲಸವಿದೆ? ಆ ಹುಡುಗ ಹೇಳಿದ: "ಅಬೂಜಹಲ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುತ್ತಿದ್ದನು ಎಂದು ನಾನು ಕೇಳಿರುವೆನು. ನಾನು ಅವನನ್ನು ನೋಡಿದರೆ ನಮ್ಮಿಬ್ಬರಲ್ಲಿ ಯಾರ ಜೀವಿತ ಕಾಲ ಮುಂದಾಗಿ ವಿಧಿಸಲ್ಪಟ್ಟಿದೆಯೋ ಅವನು ಮೃತನಾಗುವ ತನಕ ನನ್ನ ಕಣ್ಣುಗಳು ಅವನಿಂದ ದೂರ ಸರಿಯಲಾರದು." ಆಗ ನನಗೆ ಆಶ್ಚರ್ಯವಾಯಿತು. ಇನ್ನೊಬ್ಬ ಹುಡುಗ ಸಹ ಅದೇ ರೀತಿ ಕೇಳಿದನು. ಅಷ್ಟರೊಳಗೆ ಅಬೂಜಹಲನು ಜನರ ಮಧ್ಯೆ ತಿರುಗಾಡುತ್ತಾ ಇರುವುದಾಗಿ ಕಂಡೆನು. ಆಗ ನಾನು ಹೇಳಿದೆ ನೀವು ಯಾರ ಬಗ್ಗೆ ವಿಚಾರಿಸುತ್ತಿರುವಿರೋ ಅವನೇ ಆತ. ನನ್ನ ಮಾತು ಆಲಿಸಿದ ಕೂಡಲೆ ಆ ಹುಡುಗರಿಬ್ಬರೂ ತಮ್ಮ ಖಡ್ಗ ಹಿಡಿದು ಅಬೂಜಹಲನ ಕಡೆಗೆ ನೆಗೆದು ಅವನನ್ನು ಖಡ್ಗಗಳಿಂದ ಕಡಿದು ಹಾಕಿ ಕೊಂದು ಬಿಟ್ಟರು. ಅಬೂಜಹಲ್ ಮಣ್ಣು ಪಾಲಾದನು. ಇಕ್ರಮ ಬಿನ್ ಅಬೂಜಹಲ್ ಸಹ ತನ್ನ ತಂದೆಯೊಂದಿಗೆ ಇದ್ದನು ಅವರು ತನ್ನ ತಂದೆಯನ್ನು ಉಳಿಸಲು ಸಾಧ್ಯವಾಗಲಿಲ್ಲ ಆದರೆ ಅವನು ಹಿಂದಿನಿಂದ ಮುಆಝ್(ರ) ರವರ ಮೇಲೆ ಅಕ್ರಮಿಸಿ ಅವರ ಕೈಯನ್ನು ಕತ್ತರಿಸಿದನು ಅವರ ಕೈ ನೇತಾಡುತ್ತಿತ್ತು. ಆದರೂ ಮುಆಝ್(ರ) ಇಕ್ರಮನನ್ನು

ಹಿಂಬಾಲಿಸಿದರು ಆದರೆ ಅವನು ಓಡಿಹೋದನು. ನೇತಾಡುತ್ತಿದ್ದ ಕೈಯಿಂದ ಯುದ್ಧವಾಡಲು ಕಷ್ಟವಾಗುತ್ತಿದ್ದರಿಂದ ಮುಆಝ್(ರ) ತನ್ನ ಕೈಯನ್ನು ಸ್ವತಃ ಎಳೆದು ಬೇರ್ಪಡಿಸಿಕೊಂಡು ಯುದ್ಧವಾಡುತ್ತಿದ್ದರು." (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–362)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಈ ಘಟನೆ ಬಗ್ಗೆ ಹೇಳುತ್ತಾರೆ: "ಅಬೂಜಹಲ್ ಜನಿಸಿದಾಗ ಹಲವು ವಾರಗಳ ಕಾಲ ಒಂಟೆಗಳನ್ನು ವಧಿಸಿ ಅವುಗಳ ಮಾಂಸ ಹಂಚಲಾಗಿತ್ತು. ಅವನು ಜನಿಸಿದಾಗ ತಮಟೆಗಳ ಶಬ್ದದಿಂದ ಮಕ್ಕದ ವಾತಾವರಣ ಪ್ರತಿಧ್ವನಿಸುತ್ತಿತ್ತು. ಅವನು ಬದರ್ ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಅವನ ಮೇಲೆ ಖಡ್ಗ ಪ್ರಹಾರ ಮಾಡಿದುದು ಹದಿನೈದು ವರ್ಷ ಪ್ರಾಯದ ಇಬ್ಬರು ಅನ್‌ಸಾರಿ ಬಾಲಕರು. ಅವರಿಬ್ಬರೂ ಅವನನ್ನು ಗಾಯಗೊಳಿಸಿದರು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳುತ್ತಾರೆ: ಬದರ್ ಯುದ್ಧದ ನಂತರ ಜನರು ಮರಳಿ ಹೋಗುತ್ತಾ ಇದ್ದಾಗ ನಾನು ರಣಾಂಗಣದಲ್ಲಿ ಗಾಯಗೊಂಡವರನ್ನು ನೋಡಲು ಹೋಗಿದ್ದೆನು. ನಾನು ರಣಾಂಗಣದಲ್ಲಿ ಅಬೂ ಜಹಲನನ್ನು ಗಾಯಗೊಂಡ ಸ್ಥಿತಿಯಲ್ಲಿ ಗೋಳಾಡುತ್ತಿದ್ದುದಾಗಿ ಕಂಡೆನು. ನಾನು ಅವನ ಸಮೀಪಕ್ಕೆ ತಲಪಿದಾಗ ಅವನು ನನ್ನೊಂದಿಗೆ ಹೇಳಿದನು: ನಾನು ಬದುಕಿ ಉಳಿಯುವುದಾಗಿ ಕಾಣುವುದಿಲ್ಲ. ನೀನು ಸಹ ಮಕ್ಕದವನೇ ಆಗಿರುವೆ. ನಾನು ನಿನ್ನೊಂದಿಗೆ ಅಪೇಕ್ಷಿಸುತ್ತೇನೆ ನೀನು ನನ್ನನ್ನು ಕೊಂದು ಬಿಡು. ನನ್ನ ಕಷ್ಟ ದೂರವಾಗಲಿ. ಆದರೆ ನಿನಗೆ ಗೊತ್ತಿದೆ ನಾನು ಅರೇಬ್ಯದ ನೇತಾರನಾಗಿರುವೆನು. ಅರಬಿ ಸಂಪ್ರದಾಯ ಪ್ರಕಾರ ಮುಖಂಡರಾದ ಜನರ ಕೊರಳುಗಳನ್ನು ತಲೆಯೊಂದಿಗೆ ಕೊರಳು ಉದ್ದವಾಗಿರುವ ರೀತಿಯಲ್ಲಿ ಕಡಿಯಲಾಗುತ್ತದೆ. ಇದು ಕೊಲ್ಲಲ್ಪಟ್ಟವನ ಮುಖಂಡತ್ವದ ಸಾಕ್ಷಿಯಾಗಿರುತ್ತದೆ. ನಾನು ಅಪೇಕ್ಷಿಸುವುದೇನೆಂದರೆ ನೀನು ನನ್ನ ಕೊರಳು ತಲೆಯಿಂದ ಜೋಡಿಸಿ ಉದ್ದವಾಗಿರುವ ಹಾಗೆ ಕತ್ತರಿಸಬೇಕು. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳುತ್ತಾರೆ: ನಾನು ಅವನ ಕೊರಳನ್ನು ಗದ್ದದ ಸಮೀಪವಾಗಿ ಕತ್ತರಿಸಿದೆನು ಮತ್ತು ಹೇಳಿದೆ: ನಿನ್ನ ಈ ಕೊನೆಯ ಆಸೆ ಸಹ ಈಡೇರಲಾರದು. ಅಬೂ ಜಹಲನ ಅಂತಿಮ ಗತಿಯ ದೃಷ್ಟಿಯಿಂದ ನೋಡುವುದಾದರೆ ಅವನು ಎಷ್ಟು ಹೀನ ಸ್ಥಿತಿಯಲ್ಲಿ ಕೊಲ್ಲಲ್ಪಟ್ಟನು. ಅವನ ಜೀವಿತ ಕಾಲದಲ್ಲಿ ಅವನ ಕೊರಳು ಯಾವಾಗಲೂ ಎತ್ತರವಾಗಿರುತ್ತಿತ್ತು. ಅವನ ಮೃತ್ಯುವಿನ ಕಾಲದಲ್ಲಿ ಅವನ ಕೊರಳನ್ನು ಗದ್ದದಿಂದ ಕತ್ತರಿಸಲಾಯಿತು. ಅವನ ಕೊನೆಯ ಅಭಿಲಾಷೆ ಸಹ ಈಡೇರಲಿಲ್ಲ. (ತಫ್‌ಸೀರೆ ಕಬೀರ್, ಸಂಪುಟ–7, ಪುಟ–101)

ಹಝ್ರತ್ ರುಬೈಯ್ಯಿಬ್ ಬಿನ್ತ್ ಮುಅವ್ವಿಝ್ ವರದಿ ಮಾಡುತ್ತಾರೆ: ನನ್ನ ಚಿಕ್ಕಪ್ಪ ಹಝ್ರತ್ ಮುಆಝ್ ಬಿನ್ ಅಫ್‌ರಾ(ರ) ನನಗೆ ಕೆಲವು ತಾಜಾ ಖರ್ಜೂರಗಳನ್ನು ನೀಡಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ಕಳುಹಿಸಿದರು. ಆಗ ಪ್ರವಾದಿ(ಸ) ಅವರು ನನಗೆ ಬಹ್‌ರೈನಿನ ಓರ್ವ ನ್ಯಾಯಧಿಶನು ತಮ್ಮನ್ನು ಉಡುಗೋರೆಯಾಗಿ ನೀಡಿದ ಆಭರಣಗಳನ್ನು ನನಗೆ ನೀಡಿದರು. ಇನ್ನೊಂದು ವರದಿ ಹೀಗಿದೆ: ಹಝ್ರತ್ ರುಬೈಯ್ಯಿಬ್ ಬಿನ್ತ್ ಮುಅವ್ವಿಝ್(ರ) ವರದಿ ಮಾಡುತ್ತಾರೆ ನನ್ನ ಚಿಕ್ಕಪ್ಪ ಹಝ್ರತ್ ಮುಆಝ್(ರ) ರವರು ನನಗೆ ಒಂದು ಉಡುಗೋರೆಯನ್ನು ನೀಡಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಬಳಿ ಕಳುಹಿಸಿದಾಗ ಪ್ರವಾದಿ(ಸ) ಅವರನ್ನು ಬಹ್‌ರೈನಿನ ಓರ್ವ ನ್ಯಾಯಧೀಶನು ತಮಗೆ ನೀಡಿದ ಆಭರಣಗಳನ್ನು ನೀಡಿದರು. ಅಲ್ಲಾಮ ಇಬ್ನೆ ಅಸೀರ್ ಬರೆಯುತ್ತಾರೆ ಬಹ್‌ರೈನನ ನ್ಯಾಯಧೀಶನು ಮತ್ತು ಉಳಿದ ರಾಜರು ಪ್ರವಾದಿ(ಸ) ಅವರ ಸನ್ನಿಧಿಯಲ್ಲಿ ಇಸ್ಲಾಮ್ ಧರ್ಮವೂ ಹರಡಿದ್ದ ಕಾಲದಲ್ಲಿ ಉಡುಗೋರೆಗಳನ್ನು ಕಳುಹಿಸುತ್ತಿದ್ದರು. ಮತ್ತು ಪ್ರವಾದಿ(ಸ) ಅವರು ಸಹ ಆ ಎಲ್ಲಾ ರಾಜರಿಗೆ ಪತ್ರಗಳನ್ನು ಬರೆದು ಉಡುಗೊರೆಗಳನ್ನು ಕಳುಹಿಸುತ್ತಿದ್ದರು. ಹೀಗೆ ಅವರು ಸಹ ತಮ್ಮ ಸನ್ನಿಧಿಯಲ್ಲಿ ಪತ್ರಗಳನ್ನು ಬರೆದು ಉಡುಗೊರೆಗಳನ್ನು ಕಳುಹಿಸುತ್ತಿದ್ದರು. (ಉಸದುಲ್‌ಗಾಬ ಸಂಪುಟ–5, ಪುಟ–192, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಮುಆಝ್ ಬಿನ್ ಹಾರಿಸ್(ರ) ರವರ ನಾಲ್ಕು ವಿವಾಹಗಳಾಗಿತ್ತು ಅದರ ವಿವರ ಹೀಗಿದೆ ಹಬಿಯ್ಯ ಬಿನ್ತ್ ಖೈಸ್, ಅವರಿಂದ ಪುತ್ರ ಉಬೈದುಲ್ಲಾ ಜನಸಿದರು. ಎರಡನೆಯ ವಿವಾಹ ಉಮ್ಮೆ ಹಾರಿಸ್ ಬಿನ್ತ್ ಸಬ್ರಹ್ ಅವರಿಂದ ಹಾರಿಸ್, ಔಫ್, ಸಲ್ಮಾ, ಉಮ್ಮೆ ಅಬ್ದುಲ್ಲಾ ಹಾಗೂ ರಮ್‌ಲಾ ಜನಿಸಿದರು. ಉಮ್ಮೆ ಅಬ್ದುಲ್ಲಾ ಮೂರನೆಯ ಪತ್ನಿ ಆಗಿದ್ದರು ಅವರಿಂದ ಇಬ್ರಾಹೀಮ್ ಮತ್ತು ಆಯಿಶ ಜನಿಸಿದರು. ನಾಲ್ಕನೆಯ ಪತ್ನಿ ಉಮ್ಮೆ ಸಾಬಿತ್ ರಮ್‌ಲ ಬಿನ್ತ್ ಹಾರಿಸ್ ಆಗಿದ್ದರು ಅವರಿಂದ ಸಾರ ಜನಿಸಿದರು. (ಅತ್ತಬಖಾತುಲ್ ಕುಬ್ರ ಭಾಗ–3, ಪುಟ–373–374, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಅಲ್ಲಾಮ ಇಬ್ನೆ ಅಸೀರ್ ತಮ್ಮ ಗ್ರಂಥ ಉಸದುಲ್ ಗಾಬದಲ್ಲಿ ಹಝ್ರತ್ ಮುಆಝ್(ರ) ರವರ ನಿಧನದ ಬಗ್ಗೆ ಬೇರೆ ಬೇರೆಯ ಹೇಳಿಕೆಗಳನ್ನು ಬರೆದಿದ್ದಾರೆ:

ಒಂದು ಹೇಳಿಕೆ ಪ್ರಕಾರ ಹಝ್ರತ್ ಮುಆಝ್(ರ) ಬದರ್ ಯುದ್ಧದಲ್ಲಿ ಗಾಯಗೊಂಡರು. ಮದೀನಕ್ಕೆ ಮರಳಿ ಬಂದ ನಂತರ ಆ ಗಾಯದ ಕಾರಣ ಅವರು ನಿಧನ ಹೊಂದಿದರು. ಇನ್ನೊಂದು ಹೇಳಿಕೆ ಪ್ರಕಾರ ಹಝ್ರತ್ ಮುಆಝ್, ಹಝ್ರತ್ ಉಸ್ಮಾನರ(ರ) ಖಿಲಾಫತ್ ಕಾಲದ ತನಕ ಜೀವಿಸಿದ್ದರು. ಅವರು ಹಝ್ರತ್ ಅಲಿ(ರ) ರವರ ಖಿಲಾಫತ್ ಕಾಲದ ತನಕ ಬದುಕಿದ್ದರು ಎಂದೂ ಸಿಫ್ಫೀನ್ ಯುದ್ಧದಲ್ಲಿ ಮೃತರಾದರು ಎಂದೂ ಮತ್ತೊಂದು ವರದಿಯಲ್ಲಿ ಹೇಳಲಾಗಿದೆ. ಸಿಫ್ಫೀನ್ ಯುದ್ಧ ಹಿಜರಿ ವರ್ಷ 36 ಮತ್ತು 37ರಲ್ಲಿ ನಡೆಯಿತು. ಹಝ್ರತ್ ಮುಆಝ್, ಹಝ್ರತ್ ಅಲಿಯವರ ಪರವಾಗಿ ಯುದ್ಧಲ್ಲಿ ಭಾಗವಹಿಸಿದ್ದರು. (ಉಸದುಲ್‌ಗಾಬ ಸಂಪುಟ–6, ಪುಟ–191, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಭಾಗ–3, ಪುಟ–1409–1410 ದಾರುಲ್ ಜೀಲ್ ಬೈರೂತ್)

ಈ ಸಹಾಬಿಯ ಪ್ರಸ್ತಾವದ ನಂತರ ಈಗ ನಾನು ಮುಕರ್ರಮ್ ರಾನಾ ನಈಮುದ್ದೀನ್ ಸಾಹಿಬ್ ಬಿನ್ ಮುಕರ್ರಮ್ ಫಿರೋಝ್ ದೀನ್ ಮುನ್‌ಶೀ ಸಾಹಿಬರ ಬಗ್ಗೆ ಪ್ರಸ್ತಾಪಿಸುವೆನು. ಅವರು 2020 ಏಪ್ರಿಲ್ ದಿನಾಂಕ 9ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಒಂದು ಸುದೀರ್ಘ ಕಾಲದಿಂದ ಅನಾರೋಗ್ಯರಾಗಿದ್ದರು. ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು. ವೈದ್ಯರು ಸಹ ಇವರ ಕೊನೆಯಗಳಿಗೆ ಆಗಿದೆ ಎಂದು ಹೇಳುತ್ತಿದ್ದರು. ಅನಂತರ ಅಲ್ಲಾಹನು ಅನುಗ್ರಹಿಸುತ್ತಿದ್ದನು ಆರೋಗ್ಯವಂತರಾಗುತ್ತಿದ್ದರು. ಓಡಾಡಲು ಅವರಿಗೆ ಸಾಧ್ಯವಾಗುತ್ತಿದ್ದರೆ ಅವರು ಮಸೀದಿಗೆ ಆಗಮಿಸುತ್ತಿದ್ದರು. ಕೊನೆಗೆ ಅವರ ಈ ರೋಗದ ಕಾರಣ ಅವರು ನಿಧನ ಹೊಂದಿದರು.

ರಾನ ಸಾಹೆಬ್ ಅವರು 1934ರಲ್ಲಿ ಜನಿಸಿದರು. ಕೆಲವು ವರದಿಗಳ ಪ್ರಕಾರ ಅವರು 1930ರಲ್ಲಿ ಅಥವಾ 1932ರಲ್ಲಿ ಜನಿಸಿದರು. ಅವರ ಪಿತ ಮುಹ್ತರಮ್ ಫಿರೋಝ್ ದೀನ್ ಸಾಹಿಬ್ 1906ರಲ್ಲಿ ಪತ್ರದ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ್ದರು. ಅನಂತರ ಹಿಂದುಸ್ತಾನ ಮತ್ತು ಪಾಕಿಸ್ತಾನದ ವಿಭಜನೆಯ ನಂತರ ಈ ಕುಟುಂಬವು ಪಾಕಿಸ್ತಾನಕ್ಕೆ ತೆರಳಿದರು. ಅನಂತರ 1948ರಲ್ಲಿ ರಾನಾ ಸಾಹೇಬರು ರಬ್ವಕ್ಕೆ ಆಗಮಿಸಿದ್ದರು. ಅಲ್ಲಿ ಅವರು ಫುರ್‌ಖಾನ್ ಬಟಾಲಿಯನ್‌ಗೆ ತಮ್ಮನ್ನು ಅರ್ಪಿಸಿದರು. ಫುರ್‌ಖಾನ್ ಬಟಾಲಿಯನ್‌ನ ನಂತರ ಅವರನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರು ಮೀರ್‌ಪೂರ್ ಖಾಸ್‌ನ ಜಮೀನುಗಳನ್ನು ನೋಡಿಕೊಳ್ಳುತ್ತಾ ಅವರು ಕೆಲವು ವರ್ಷ ಇದ್ದರು. ವಸಿಯ್ಯತ್ ಯೋಜನೆಯಲ್ಲಿ ಪಾಲ್ಗೊಂಡಿದ್ದರು. ಅವರ ವಸಿಯ್ಯತ್ 1951 ರದ್ದಾಗಿತ್ತು. ಅವರ ಪತ್ನಿ ಸಾರಾ ಪರ್ವೀನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ದೌಲತ್ ಖಾನ್ ಸಾಹಿಬರ ಮೊಮ್ಮಗಳಾಗಿದ್ದರು. ರಾನಾ ಸಾಹಿಬರು 1955 ನವೆಂಬರ್ ತಿಂಗಳಿಂದ 1959 ಮೇ ದಿನಾಂಕ 11ರ ತನಕ ಅಮಲ ಹಿಫಾಝುತೆ ಖಾಸ್ ವಿಭಾಗದಲ್ಲಿ ಗಾರ್ಡ್ ಆಗಿ ಸೇವೆ ಸಲ್ಲಿಸಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರು ತಫ್‌ಸೀರ್‌ಗೆ ಸಂಬಂಧಿಸಿದ ಕೆಲಸಕ್ಕೋಸ್ಕರ ನಖ್‌ಲ ಜಾಬ ಎಂಬಲ್ಲಿಗೆ ಆಗಾಗ ಹೋಗುತ್ತಾ ಇದ್ದಾಗ ರಾನಾ ಸಾಹಿಬರು ಭದ್ರತೆಗೋಸ್ಕರ ಮತ್ತು ಜನರೇಟರ್‌ಗೆ ಸಂಬಂಧಿಸಿ ಕೆಲಸ ಮಾಡಲು ಹೋಗುತ್ತಾ ಇದ್ದರು.

1978ರಲ್ಲಿ ಭದ್ರತೆಯ ವಿಭಾಗದಿಂದ ನಿವೃತ್ತರಾದರು ಮತ್ತು ಸಾಹೀವಾಲ್ ಜಿಲ್ಲೆಯ ಹಡ್‌ಪಕ್ಕೆ ಹೋದರು. ಅಲ್ಲಿ ಅವರು ಅಹ್ಮದಿಯಾ ಮಸ್‌ಜಿದ್‌ನಲ್ಲಿ ಖಾದಿಮೆ ಮಸ್‌ಜಿದ್ ಆಗಿ ಸೇವೆ ಮಾಡುತ್ತಿದ್ದರು. 1984ರಲ್ಲಿ ಸಾಹಿವಾಲ್‌ನ ಅಹ್ಮದಿಯಾ ಮಸ್‌ಜಿದನ್ನು ಶತ್ರುಗಳು ಆಕ್ರಮಣ ಮಾಡಿದಾಗ ರಾನಾ ಸಾಹಿಬರು ಭದ್ರತೆ ನೀಡುವ ಉದ್ಯೋಗಿಯಾಗಿದ್ದ ಕಾರಣ ಆಕ್ರಮಣಗಾರರನ್ನು ಎದುರಿಸಿದರು. ರಾನಾ ನಈಮುದ್ದೀನ್ ಸಾಹಿಬರು ಸೇರಿ ಹನ್ನೊಂದು ಜನರ ವಿರುದ್ಧ ಮೊಕದ್ದಮೆ ದಾಖಲಿಸಲ್ಪಟ್ಟಿತ್ತು. ರಾನಾ ಸಾಹಿಬರು 1984 ಅಕ್ಟೋಬರ್‌ನಿಂದ 1994 ಮಾರ್ಚ್ ತನಕ ಅಸೀರಾನೆ ರಾಹೆ ಮೌಲಾ (ಅಲ್ಲಾಹನ ಮಾರ್ಗದ ಕೈದಿ) ಆಗಿದ್ದರು.

ಪೋಲೀಸರು ಆಕ್ರಮಣ ಮಾಡಿದ ಪುಂಡರ ವಿರುದ್ಧ ಕಾರ್ಯ ನಿರ್ವಹಿಸುವ ಬದಲು ನಮ್ಮ 11 ಜನರ ವಿರುದ್ಧ ಮೊಖದ್ದಮೆ ದಾಖಲಿಸಿ ಅವರಿಗೆ ಶಿಕ್ಷೆ ನೀಡಿದರು. ಈ ವ್ಯಾಜ್ಯವನ್ನು ಮಿಲಿಟರಿ ನ್ಯಾಯಾಲಯಕ್ಕೆ ಅರ್ಪಿಸಿದ್ದರು. ಇದು ಝಿಯಾಉಲ್ ಹಖ್‌ನ ಕಾಲದ ವಿಶೇಶ ನ್ಯಾಯಾಲಯವಾಗಿತ್ತು ಅಲ್ಲಿ ಫೆಬ್ರವರಿ 16, 1985ರಿಂದ ಹೇಳಿಕೆಗಳು ಪ್ರಾರಂಭವಾಗಿ ಜೂನ್ 1ರ ತನಕ ಈ ಹೇಳಿಕೆಗಳು ನಡೆಯಿತು. ಅದರಲ್ಲಿ

ಮೊದಲು 11 ಜನರಿದ್ದರು ನಂತರ 7 ಜನರಾಯಿತು. ಅವರಲ್ಲಿ ನಯೀಮುದ್ದೀನ್ ಸಾಹೆಬರು ಇದ್ದರು ಅವರ ತೀರ್ಮಾನವನ್ನು ಪೆಂಡಿಂಗ್ ಇಟ್ಟರು. ಇಬ್ಬರು ಹೊರ ದೇಶಕ್ಕೆ ಹೋದರು ಇನ್ನಿಬ್ಬರಿಗೆ ಸ್ವಾಧಿನ ಪಡಿಸಿದರು ಇನ್ನುಳಿದ 7 ಜನರ ವ್ಯಾಜ್ಯವನ್ನು ಪೆಂಡಿಂಗ್ ಇಟ್ಟರು. ತದನಂತರ ಆ ಮಿಲಿಟರಿ ಕೋರ್ಟ್ ಜಮಾಅತಿನ ಮುರಬ್ಬಿ ಇಲ್‌ಯಾಸ್ ಮುನೀರ್ ಸಾಹಿಬರಿಗೆ ಮತ್ತು ರಾನಾ ನಈಮುದ್ದೀನ್ ಸಾಹಿಬರಿಗೆ ಮರಣದಂಡನೆ ವಿಧಿಸಿತ್ತು. ನಂತರ ಈ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸಲಾಗಿ 1994 ಮಾರ್ಚ್‌ನಲ್ಲಿ ಲಾಹೋರ್ ಹೈಕೋರ್ಟ್ ಅವರನ್ನು ಬಿಡುಗಡೆ ಮಾಡಲು ಆಜ್ಞಾಪಿಸಿತು.

ರಾನಾ ಸಾಹಿಬರು ಬಂಧನದಲ್ಲಿದ್ದಾಗ ಅವರಿಗೆ ಬಹಳ ಹಿಂಸೆ ನೀಡಲಾಗುತ್ತಿತ್ತು. ಪೋಲೀಸರು ಅವರಿಂದ ಹೀಗೆ ಹೇಳಿಕೆ ಪಡೆಯಲು ಪ್ರಯತ್ನಿಸುತ್ತಿದ್ದರು: ನೀವು ನಿಮ್ಮ ಖಲೀಫರ ಬಾಡಿಗಾರ್ಡ್ ಆಗಿ ಕೆಲಸ ಮಾಡಿದವನಾಗಿದ್ದೀರಿ. ಆದುದರಿಂದ ಖಲೀಫರೇ ನಿಮ್ಮಗೆ ಮುಸ್ಲಿಮರನ್ನು ಕೊಲ್ಲಲು ಕಳುಹಿಸಿದ್ದರು ಎಂಬುದಾಗಿ ಹೇಳಿಕೆ ನೀಡಲು ಒತ್ತಡ ನೀಡುತ್ತಿದ್ದರು. ರಾನಾ ನಈಮುದ್ದೀನ್ ಸಾಹಿಬ್ ಈ ಮೊಕದ್ದಮೆಯಿಂದ ಬಿಡುಗಡೆ ಹೊಂದಿದ ನಂತರ 1994ರಲ್ಲಿಯೇ ಲಂಡನ್‌ಗೆ ಆಗಮಿಸಿದರು. ಅವರು ಇಲ್ಲಿ ಸಹ ತನ್ನ ಪ್ರಾಯದ ಸ್ಥಿತಿಗೆ ಮಿಗಿಲಾಗಿ ಭದ್ರತೆಯ ವಿಭಾಗದಲ್ಲಿ ತಮ್ಮ ಕೆಲಸ ಮಾಡುತ್ತಿದ್ದರು. 2010ರಲ್ಲಿ ಅವರ ಹಿರಿಯ ಪುತ್ರಿ ನಿಧನ ಹೊಂದಿದರು ಅನಂತರ ಅವರ ಪತ್ನಿಯು ಸಹ ನಿಧನ ಹೊಂದಿದರು. ಆಗ ಅವರು ನನ್ನಲ್ಲಿ ಪಾಕಿಸ್ತಾನಕ್ಕೆ ಹೋಗಬೇಕೆಂದು ಕೇಳಿಕೊಂಡರು. ನಾನು ಅವರಿಗೆ ಹೋಗಿಬೇಗ ಮರಳಿ ಬನ್ನಿ ಎಂದು ಆಜ್ಞಾಪಿಸಿದೆ. ಇವರು ಕೆಲವು ದಿವಸಕ್ಕೆ ಹೋಗಿ ಮತ್ತೆ ಪುನಃ ಬೇಗ ಮರಳಿ ಬಂದಿದ್ದರು.

ರಾನಾ ಸಾಹಿಬರು ಒಬ್ಬ ಪುತ್ರ ಮತ್ತು ನಾಲ್ವರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಅವರ ಪುತ್ರ ರಾನಾ ವಸೀಮ್ ಅಹ್ಮದ್ ವಾಖಿಫೆ ಝಿಂದಗಿ ಆಗಿದ್ದಾರೆ. ಪ್ರೈವೇಟ್ ಸೆಕ್ರೇಟರಿಯ ಕಚ್ಚೇರಿ ಯು.ಕೆ ಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ನಾಲ್ವರು ಪುತ್ರಿಯರೂ ಲಂಡನ್‌ನಲ್ಲಿ ವಾಸಿಸುತ್ತಿದ್ದಾರೆ. ಅವರ ಪುತ್ರ ಬರೆಯುತ್ತಾರೆ: ನಮ್ಮ ತಂದೆ ನಮಗೆ ಖಿಲಾಫತ್‌ನೊಂದಿಗೆ ಅಂಟಿಕೊಂಡಿರಬೇಕೆಂದು ಉಪದೇಶಿಸುತ್ತಿದ್ದರು. ಅವರು ಸ್ವತಃ ಖಿಲಾಫತ್‌ನ ಪ್ರೇಮಿ ಆಗಿದ್ದರು. ನಾನು ಡ್ಯುಟಿಗೆ ಹೋದಾಗ ಖಲೀಫರನ್ನು ನೋಡುತ್ತಲೇ ನಾನು ಯೌವ್ವನಾವಸ್ಥೆಗೆ ತಲುಪುತ್ತೇನೆ ಎಂದು ಹೇಳುತ್ತಿದ್ದರು ನನ್ನ ಆರೋಗ್ಯದ ಮೂಲ ಕಾರಣವೂ ಸಹ ಇದೇ ಆಗಿದೆ ಇಲ್ಲದಿದ್ದರೆ ನಾನೂ ಯಾವುದಾದರು ಹಾಸಿಗೆ ಹಿಡಿದುಕೊಳ್ಳುತ್ತಿದ್ದೆ. ಹೊತ್ತಿನ ವಿಷಯದಲ್ಲಿ ಬಹಳ ನಿಷ್ಠೆವಹಿಸುತ್ತಿದ್ದರು. ಡ್ಯುಟಿಗಾಗಿ ಎರಡು ಮೂರು ಗಂಟೆಗಳ ಮುಂಚೆಯೇ ಸಿದ್ಧರಾಗುತ್ತಿದ್ದರು. ಒಂದು ವೇಳೆ ನಾನು ಅವರಿಗೆ ಇನ್ನು ಬಹಳ ಹೊತ್ತಿದೆ ಎಂದು ಹೇಳಿದಾಗ ಅವರು ಮನೆಯಲ್ಲಿದ್ದು ಏನು ಮಾಡುವುದು ಎಂದು ಹೇಳುತ್ತಿದ್ದರು.

ಡಾ॥ ಹಿಶ್ಶಾಮ್ ಸಾಹೆಬ್ ಬರೆಯುತ್ತಾರೆ: ನಾನು ಅವರ ಎಲ್ಲಾ ಪತ್ರಗಳನ್ನು ಪರಿಶೀಲಿಸಿದ್ದೇನೆ ನನಗೆ ಬಹಳ ಆಶ್ಚರ್ಯ ಉಂಟಾಗುತ್ತದೆ ಇಂತಹ ಕಾಯಿಲೆಯ ವ್ಯಕ್ತಿಯು ಮನೆಯಲ್ಲಿರಬೇಕು ಅಥವಾ ಕೇರ್ ಹೋಮ್‌ನಲ್ಲಿರಬೇಕು ಆದರೆ ಇವರು ಓಡಾಡಿಕೊಂಡಿರುತ್ತಿದ್ದರು. ಅದಕ್ಕೆ ಅವರು ಹೇಳುತ್ತಿದ್ದರು ನನ್ನ ಆರೋಗ್ಯಕ್ಕೆ ಮೂಲ ಕಾರಣ ಖಲೀಫರೊಂದಿಗಿನ ಸಂಬಂಧವಾಗಿದೆ ಮತ್ತು ನಾನು ಯೋಚಿಸುವುದೇನೆಂದರೆ ಸದಾ ಖಲೀಫರ ಆಸ್ಥಾನದಲ್ಲಿರಲಿ ಎಂದು ಇದೇ ಮೂಲ ಕಾರಣವಾಗಿದೆ ಎನ್ನುತ್ತಿದ್ದರು. ಅವರ ಪುತ್ರ ಬರೆಯುತ್ತಾರೆ ಅವರು ಸಾಮಾನ್ಯವಾಗಿ ಅವರ ದೇಹವನ್ನು ಮಾಲಿಷ್ ಮಾಡುತ್ತಿದ್ದರು. ಒಮ್ಮೆ ನಾನು ಅವರ ಕಾಲಿನ ಮಾಲಿಷ್ ಮಾಡುತ್ತಿದ್ದೆ ಅವರ ಮಣಕಾಲಿನ ತನಕ ತಲುಪಿದಾಗ ಆಗ ಅವರ ಧ್ವನಿ ಸ್ವಲ್ಪ ಜೋರಾಯಿತು. ಅದಕ್ಕೆ ನಾನು ಅವರಿಗೆ ಪ್ರಶ್ನಿಸಿದೆ ಏನಾಯಿತು ಎಂದು ಅದಕ್ಕೆ ಅವರು ಏನು ಆಗಿಲ್ಲ ಎಂದು ಉತ್ತರಿಸಿದರು. ಅವರು ಹೇಳುತ್ತಾರೆ ನಾನು ಮತ್ತೆ ಒತ್ತು ನೀಡಿ ಕೇಳಿದಾಗ ಅವರು ಹೇಳಿದರು ಇದು ಸೆರೆಯಲ್ಲಿದಾಗ ಆದ ಗಾಯಗಳ ನೋವಾಗಿದೆ. ಯಾವಾಗಲೂ ತಾಳ್ಮೆ ಸಹನೆ ವಹಿಸುವವರಾಗಿದ್ದರು. ಪಾಕಿಸ್ತಾನಿನ ಜೈಲುಗಳಲ್ಲಿ ಬಹಳ ಹಿಂಸೆ ನೀಡುತ್ತಾರೆ. ಇವೆಲ್ಲವನ್ನು ಅವರು ಬಹಳ ಸಹನೆಯಿಂದ ಸಹಿಸಿಕೊಂಡಿದ್ದರು. ಅನಂತರ ಹೊರಗಡೆ ಬಂದ ನಂತರವೂ ಅವರ ಸಂಕಷ್ಟಗಳನ್ನು ಯಾರ ಬಳಿ ವಿವರಿಸುತ್ತಾ ಇರಲಿಲ್ಲ ಬಹಳ ಸಹನೆಯಿಂದ ಇರುತ್ತಿದ್ದರು. ಯಾವಾಗಾದರು ಅವರು ಅನಾರೋಗ್ಯವಾದಾಗಲು ಯಾರಿಗೂ ಹೇಳುತ್ತಿರಲಿಲ್ಲ. ಯಾವಾಗಲೂ ಅಲ್‌ಹಮ್‌ದುಲಿಲ್ಲಾಹ್ ನಾನು ಆರೋಗ್ಯವಾಗಿದ್ದೇನೆ ಎಂದು ಹೇಳುತ್ತಿದ್ದರು.

ಅವರು ಖಿಲಾಫತ್‌ನೊಂದಿಗೆ ಎಂತಹ ನಿಷ್ಠೆ ಹೊಂದಿದ್ದರು? ಇದರ ಬಗ್ಗೆ ಹೇಳುತ್ತಾರೆ: ಒಮ್ಮೆ ನಾನು ತಂದೆಯ ಬಳಿ ಕುಳಿತುಕೊಂಡಿದ್ದೆ, ನಾನು ಅವರಿಗೆ ಸಾಮಾನ್ಯವಾಗಿ ಘಟನೆಗಳನ್ನು ಹೇಳಿರಿ ಎಂದು ಹೇಳುತ್ತಿದ್ದೆ. ಒಮ್ಮೆ ಹೇಳುತ್ತಿದ್ದರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರು ಜಾಬೆನಖ್ಖಾಗೆ ಹೋದಾಗ. ನಾನು ಅವರೊಂದಿಗೆ ಇದ್ದೆ. ಅವರು ಯಾವುದೋ ವಿಷಯದಲ್ಲಿ ನನ್ನೊಂದಿಗೆ ಬೇಸರಗೊಂಡರು ಆಗ ಹುಝೂರ್ ಹೇಳಿದರು ನೀವು ಮಸೀದಿಗೆ ಹೋಗಿ ಇಸ್ತಿಗ್‌ಫಾರ್ ಮಾಡಿರಿ ಎಂದರು. ಅವರು ಹೇಳುತ್ತಾರೆ ನಾನು ಮಸೀದಿಗೆ ಹೋದೆ. ಜಾಬೆನಲ್ಲಿ ಚಿಕ್ಕದಾದ ಒಂದು ಮಸೀದಿ ಇತ್ತು. ಮಸೀದಿಯ ಅಂಗಳದಲ್ಲಿ ಕುಳಿತುಕೊಂಡು ಅಸ್ತಗ್‌ಫಾರ್ ಮಾಡುತ್ತಿದ್ದೆ ಇಷ್ಟರಲ್ಲಿ ಬಹಳ ಜೋರಾಗಿ ಬಿರುಗಾಳಿ ಪ್ರಾರಂಭವಾಗಿ ಮಳೆಯು ಪ್ರಾರಂಭವಾಯಿತು ಆದರೆ ನಾನು ಕುಳಿತಿದ್ದ ಜಾಗದಲ್ಲಿಯೇ ಕುಳಿತುಕೊಂಡು ಇಸ್ತಿಗ್‌ಫಾರ್ ಮಾಡುತ್ತಿದ್ದೆ. ಬಹಳ ಹೊತ್ತಾದಾಗ ಮಸೀದಿಯ ಒಂದು ಭಾಗದ ಛಪ್ಪರವೂ ಹಾರಿಹೋಯಿತು. ಆಗ ಹುಝೂರ್ ಖಲೀಫತುಲ್ ಮಸೀಹ್ ಸಾನಿ ಕೇಳಿದರು ನಯೀಮ್ ಎಲ್ಲಿದ್ದಾನೆ ಎಂದು. ಕೆಲ ಜನರು ನನ್ನನ್ನು ಹುಡುಕಿಕೊಂಡು ಮಸೀದಿಗೆ ಆಗಮಿಸಿ ಹೇಳಿದರು ನಿಮಗೆ ಹುಝೂರ್ ಕರೆಯುತ್ತಿದ್ದಾರೆ ಎಂದು. ಅನಂತರ ನಾನು ಹುಝೂರ್ ಬಳಿ ಬಂದಾಗ ಹೇಳಿದರು: ನನಗೆ ಗೊತ್ತಿತ್ತು ನೀವು ಅಲ್ಲಿಯೇ ಕುಳಿತಿರಬಹುದು ಎಂದು. ನಾನು ನಮಗೆ ಕ್ಷಮಿಸಿದ್ದೇನೆ. ಮತ್ತೆ ಈ ಪುತ್ರರೇ ಬರೆಯುತ್ತಾರೆ: ಖಲೀಫತುಲ್ ಮಸೀಹ್ ಸಾನಿ(ರ) ರವರು ತಫ್ಸೀರ್ ಬರೆಯಲು ಪ್ರಾರಂಭಿಸಿದಾಗ ನಮ್ಮ ತಂದೆಯವರಿಗೆ ಹುಝೂರ್‌ರವರ ಸೇವೆ ಮಾಡಲು ಅವಕಾಶ ಲಭಿಸಿತು. ಅವರು ತಮ್ಮ ಈ ಸೇವೆಯ ಬಗ್ಗೆ ಹೇಳುತ್ತಾ ಇರುತ್ತಿದ್ದರು. ನಮ್ಮ ತಂದೆಯವರ ಒಂದು ಹವ್ಯಾಸ ಏನಾಗಿತ್ತು ಎಂದರೆ ಅವರು ತಮ್ಮ ಸಂತೋಷದ ವಿಷಯವನ್ನು ಎಲ್ಲರೊಂದಿಗೂ ಹಂಚಿಕೊಳ್ಳುತ್ತಿದ್ದರು. ಆದರೆ ದುಃಖದ ವಿಷಯವನ್ನು ಯಾರೊಂದಿಗೂ ಹಂಚಿಕೊಳ್ಳುತ್ತಿರಲಿಲ್ಲ.

ಅವರ ಇನ್ನೊಂದು ವಿಶೇಷತೆಯನ್ನು ಪ್ರಸ್ತಾಪಿಸುತ್ತಾರೆ: ಅವರು ದಯಾಳು ತಂದೆ, ಮತ್ತು ಆಪ್ತ ಮಿತ್ರರಾಗಿದ್ದರು. ನನ್ನ ವಕ್‌ಫ್ ಅಂಗೀಕರಿಸಲ್ಪಟ್ಟಾಗ ಒಂದು ದಿನ ನನ್ನ ಪಿತ ಹೇಳಿದರು: ಇದು ಬಹಳ ಹಿರಿದಾದ ಹೊಣೆಗಾರಿಕೆಯಾಗಿದೆ. ಯಾವಾಗಲೂ ತೌಬ ಮತ್ತು ಇಸ್ತಿಗ್‌ಫಾರ್ ಮಾಡುತ್ತಾ ನಿನ್ನ ವಕ್‌ಫ್ ಹೊಣೆಗಾರಿಕೆ ನಿಭಾಯಿಸಬೇಕು. ಯಾರಾದರೂ ನಿನಗೆ ದುಃಖ ನೀಡಿದರೆ ಮೌನವಾಗಿರಬೇಕು. ವಾಗ್ವಾದ ಮಾಡಬಾರದು. ಎಲ್ಲಾ ವಿಷಯಗಳನ್ನು ಅಲ್ಲಾಹನ ನಿರ್ಧಾರಕ್ಕೆ ಬಿಟ್ಟುಬಿಡಬೇಕು. ಸಹನೆ ತೋರಬೇಕು. ಸಹನೆಯನ್ನು ಎಂದೂ ಕೈಬಿಡಬಾರದು. ಅಲ್ಲಾಹನು ಸಹನೆ ತೋರುವವರ ಜೊತೆಗಿರುತ್ತಾನೆ. ಅವರು ಓರ್ವ ಆಪ್ತ ಮಿತ್ರರ ಹಾಗೆ ಉಪದೇಶಿಸುತ್ತಿದ್ದರು. ಮತ್ತೆ ಹೇಳುತ್ತಾರೆ ನನ್ನ ಪತ್ನಿಯೊಂದಿಗೆಯು ಪುತ್ತರಿಗಿಂತ ಹೆಚ್ಚಾಗಿ ವರ್ತಿಸುತ್ತಿದ್ದರು. ರಾನಾ ಸಾಹಿಬರ ಪುತ್ರ ಹೇಳುತ್ತಾರೆ: ನನ್ನ ತಂದೆಯವರು ರಬ್ವದಲ್ಲಿ ಹಝ್ರತ್ ಅಮ್ಮಾಜಾನ್‌ರವರ ನಿವಾಸದಲ್ಲಿ ದ್ವಾರಪಾಲಕನಾಗಿ ಸಹ ಕೆಲಸ ಮಾಡಿದ್ದರು. ಅವರು ಸ್ವತಃ ವಸಿಯ್ಯತ್ ಮಾಡಿದಾಗ ತಮ್ಮ ಎಲ್ಲಾ ಸಂಬಂಧಿಕರಿಗೂ ವಸಿಯ್ಯತ್ ಮಾಡಲು ಉಪದೇಶಿಸುತ್ತಿದ್ದರು. ಚಂದಾ ನೀಡುವುದರಲ್ಲಿ ಬಹಳ ನಿಷ್ಠೆವಹಿಸುತ್ತಿದ್ದರು. ಪ್ರತಿ ತಿಂಗಳ ಮೊದಲನೇಯ ತಾರೀಖಿಗೆ ಅವರು ಚಂದ ಕಡ್ಡಾಯವಾಗಿ ನೀಡುತ್ತಿದ್ದರು. ಯಾವಾಗಲು ರಹಸ್ಯವಾಗಿ ಅನೇಕ ಜನರಿಗೆ ಸಹಾಯ ಮಾಡುತ್ತಿದ್ದರು. ಎಂದಿಗೂ ಅವರು ಇದರ ಬಗ್ಗೆ ಚರ್ಚೆ ಮಾಡುತ್ತಿರಲಿಲ್ಲ. ಅವರ ಪುತ್ರಿಯರು ಹೇಳುತ್ತಾರೆ: ನಮ್ಮ ತಂದೆಯವರ ಖಿಲಾಫತ್‌ನೊಂದಿಗೆ ಸಂಬಂಧ ನೋಡಿ ನಮಗೆ ಅಸೂಯೆ ಉಂಟಾಗುತ್ತಿತ್ತು. ಖಿಲಾಫತ್‌ನೊಂದಿಗೆ ಪ್ರೀತಿ ಅವರಲ್ಲಿ ತುಂಬಿ ತುಳುಕಾಡುತ್ತಿತ್ತು. ಯಾವಾಗಾದರೂ ಖಲೀಫರ ಪ್ರಸ್ತಾವನೆ ಆದಾಗ ಅವರ ಕಣ್ಣು ತುಂಬಿಬರುತ್ತಿತ್ತು.

ಅವರ ಪುತ್ರಿ ಅಧಿಕಾರಿಯ ಗೌರವದ ಘಟನೆಯೊಂದನ್ನು ಪ್ರಸ್ತಾಪಿಸುತ್ತಾರೆ: ಒಮ್ಮೆ ನಾವೆಲ್ಲ ಸಹೋದರಿಯರು ನಮ್ಮ ಪಿತಾಮಹರವರೊಂದಿಗೆ ಭೇಟಿಯಾಗಲು ಪ್ರೈವೇಟ್ ಸೆಕ್ರೇಟರಿಯವರ ಕಚೇರಿಯಲ್ಲಿ ಕುಳಿತಿದ್ದೆವು. ಆಗ ನಮ್ಮ ತಂದೆಯವರು ತಕ್ಷಣವೇ ಎದ್ದು ನಿಂತರು ನಮಗೆ ತಿಳಿದು ಬಂದಿಲ್ಲ ಇವರು ಏಕೆ ತಕ್ಷಣೆ ಹೀಗಾದರು ಎಂದು ನಂತರ ನಾವು ನೋಡಿದೆವು ಅಲ್ಲಿ ಹಿಫಾಝುತೆ ಖಾಸ್‌ನ ಉಪ ಅಧಿಕಾರಿಗಳು ಯಾವುದೋ ಕೆಲಸದ ಕಾರಣ ಅಲ್ಲಿ ಆಗಮಸಿದ್ದರು. ಅಲ್ಲಿ ಅವರು ಇರುವ ತನಕ ಅವರು ಹಾಗೆಯೇ ಗಾಂಭೀರ್ಯದಿಂದ ನಿಂತಿದ್ದರು. ಆ ಅಧಿಕಾರಿಗಳು ಅಲ್ಲಿಂದ ಮರಳಿ ಹೋದನಂತರ ಅವರು ತಮ್ಮ ಜಾಗದಲ್ಲಿ ಆಸೀನರಾದರು. ಅವರು ಹೇಳುತ್ತಾರೆ ಇದು ಕೇವಲ ಕೆಲ ನಿಮಿಷಗಳ ವಿಷಯವಾಗಿತ್ತು ಆದರೆ ಇದು ನಮಗೆ ಬಹಳ ವಿಷಯಗಳನ್ನು ಕಲಿಸಿತು. ನಮಗೆ ಇಡೀ ಜೀವನಾವಧಿಯಲ್ಲಿ ಹೀಗೆ ಉಪದೇಶಿಸುತ್ತಿದ್ದರು: ಜೀವನದಲ್ಲಿ ನೀವು ಉಪಯೋಗ ಗಳಿಸಬೇಕಾದರೆ ನೀವು ಖಿಲಾಫತ್‌ನೊಂದಿಗೆ ಹೇಗೆ ಒಂದು ಲೋಹಚುಂಬಕವು ಕಬ್ಬಿಣದೊಂದಿಗೆ ಅಂಟಿಕೊಂಡಿರುತ್ತದೆಯೋ ಹಾಗೆಯೇ ನೀವು ಖಿಲಾಫತ್‌ನೊಂದಿಗೆ ಅಂಟಿಕೊಂಡಿರಿ. ಈಗ ತಮ್ಮ ಮೃತ್ಯುವಿನ ಕೆಲ ದಿನ ಮುಂಚೆ ಅವರು ತಮ್ಮ ಮಕ್ಕಳಿಗೆ ಈದಿ ನೀಡಿದ್ದರು. ಇವರು ಹೇಳುತ್ತಾರೆ ನನಗೆ ಮತ್ತು ನಮ್ಮ ಎಲ್ಲಾ ಸಹೋದರ, ಸಹೋದರಿಯರಿಗೆ ಹಾಗೂ ಅತ್ತಿಗೆಯರಿಗೆ ಈದಿ ನೀಡಿದಾಗ ನಾವು ಹೇಳಿದೆವು ಅಬ್ಬುಜಾನ್ ಇನ್ನು ಪವಿತ್ರ ಮಾಸ ರಮಝಾನ್ ಪ್ರಾರಂಬವಾಗಲಿಲ್ಲ. ಅದಕ್ಕೆ ಅವರು ಉತ್ತರಿಸಿದರು ಸಮಯ ಹೇಗಿರುವುದು ಎಂದು ನಮಗೆ ಅರಿವಿಲ್ಲ ನಮ್ಮ ಕರ್ಮಗಳನ್ನು ನಾವು ನಿಭಾಸಬೇಕು ಎಂದರು.

ಅವರ ಸೊಸೆ ಹೇಳುತ್ತಾರೆ: ನನ್ನ ಬಗ್ಗೆ ನಹಳ ಕಾಳಜಿ ವಹಿಸುತ್ತಿದ್ದರು. ಯಾವಾಗಲು ನನಗೆ ತಂದೆಯ ರೀತಿಯಲ್ಲಿ ಉಪದೇಶಿಸುತ್ತಿದ್ದರು. ಅವರ ಸೊಸೆಯ ತಂದೆ ನಿಧನ ಹೊಂದಿದಾಗ ಅವರ ಪುತ್ರನಿಗೆ ಹೇಳಿದರು ನೀನು ಮತ್ತೆ ನಿನ್ನ ಪತ್ನಿ ತಕ್ಷಣ ಪಾಕಿಸ್ತಾನಕ್ಕೆ ಹೋಗಿ ಅವರ ಜನಾಝದಲ್ಲಿ ಭಾಗವಹಿಸಿ. ಅವರ ಸೊಸೆ ಬರೆಯುತ್ತಾರೆ ನನಗೆ ಯಾವಾಗಾದರೂ ಮಧ್ಯರಾತ್ರಿಯಲ್ಲಿ ಎಚ್ಚರವಾದಾಗ ನಾನು ಅವರು ನಮಾಝ್ ನಲ್ಲಿ ನಿರತರಾಗಿರುವುದನ್ನು ಕಂಡೆನು. ಖಿಲಾಫತ್‌ನ ಬಹಳ ದೊಡ್ಡ ಪ್ರೇಮಿ ಆಗಿದ್ದರು. ಪ್ರತಿಯೊಬ್ಬ ಬರೆಯುವವನು ಇವರು ಖಿಲಾಫತ್‌ನ ಬಗ್ಗೆ ನಿಷ್ಠೆ ಹೊಂದಿದ್ದರು ಎಂದೇ ಪ್ರಸ್ತಾಪಿಸಿದ್ದಾರೆ. ಮತ್ತು ಅವರು ಹೇಳುತ್ತಿದ್ದರು ಖಿಲಾಫತ್‌ನ ದುಆಗಳಿಂದಲೇ ನಾನು ಜೈಲಿನಲ್ಲಿದ್ದೆನು ಮತ್ತು ಖಿಲಾಫತ್‌ನ ದುಆಗಳಿಂದಲೇ ಇಲ್ಲೂ ಇದೇನೆ. ಮತ್ತು ಯಾವ ರಾಷ್ಟ್ರದ ಪ್ರಧಾನಿಯು ಮೃತ್ಯುವಿನ ಕಾಗದಗಳಲ್ಲಿ ಹಸ್ತಾಕ್ಷರ ಮಾಡಿದ್ದನೋ ಖಿಲಾಫತ್‌ನ ದುಆಗಳ ಕಾರಣದಿಂದ ಅವನು ಎಲ್ಲಿ ಹೋದನು ಎಂದು ಅರಿವಿಲ್ಲ. ಆದರೆ ರಾನಾ ಸಾಹೆಬ್ ಒಂದು ಜೀವಂತ ಕುರುಹುವಾಗಿ ಲೋಕದ ಮುಂದೆ ಬಂದರು.

ಅವರ ಪುತ್ರಿ ಆಬಿದ ಹೇಳುತ್ತಾರೆ: ನನ್ನ ಮಕ್ಕಳಿಗೆ ಅವರು ಯಾವಾಗಲು ಹೀಗೆ ಉಪದೇಶಿಸುತ್ತಿದ್ದರು. ಅಲ್ಲಾಹನಿಂದ ಹಾಗೂ ಖಿಲಾಫತ್‌ನೊಂದಿಗೆ ಯಾವಾಗಲು ಒಂದು ಸ್ಪಷ್ಟವಾದ ಸಂಬಂಧ ಹೊಂದಿರಬೇಕು ಇದರಲ್ಲಿಯೇ ನಿಮಗೆ ಒಳಿತಿದೆ. ಯಾವಾಗಲೂ ಪವಿತ್ರ ಖುರ್‌ಆನಿನ ಪಠಣ ಮಾಡುತ್ತಾ ಇರಿ. ನಮಾಝ್ ಹಾಗೂ ತಹಜ್ಜುದ್ ನಮಾಝ್ ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ನಾವು ಎಂದೂ ಅವರಿಗೆ ನಮಾಝ್ ತಹಜ್ಜುದ್ ಬಿಟ್ಟಿದ್ದನ್ನು ಕಾಣಲಿಲ್ಲ. ನಮಗೆ ಇದು ದುಆಗಳ ಒಂದು ನಿಧಿ ಆಗಿತ್ತು. ಬಹಳ ಅತಿಥಿ ಸತ್ಕಾರ ಮಾಡುವವರಾಗಿದ್ದರು. ಬಡ ಸಂಬಂಧಿಕರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ರಾನಾ ಸಾಹೆಬ್ ಅವರ ತಂದೆ, ತಾಯಿಯ ಮತ್ತು ಅವರ ಮೃತರಾದ ಪತ್ನಿಯ ಚಂದವನ್ನು ಸಹ ಕಡ್ಡಾಯವಾಗಿ ಪಾವತಿಸುತ್ತಿದ್ದರು. ಅವರು ಹೇಳುತ್ತಾರೆ ನಾನು ನಮ್ಮ ತಂದೆಯನ್ನು ಒಂದು ಪಂಕ್ತಿಯನ್ನು ಉಚ್ಚ ಧ್ವನಿಯಲ್ಲಿ ಓದುತ್ತಿದ್ದನ್ನು ಯಾವಾಗಲು ನೋಡಿದ್ದೇನೆ.

**ಹೊಫರ್ಝ್ ತೇರ ಯಾ ರಬ್ ಯಾ ಕೋಯಿ ಇಬ್ತಿಲಾ ಹೋ,**
**ರಾಝಿ ಹೈಂ ಹಮ್ ಉಸಿ ಮೆ ಜಿಸ್ಮೆ ತೇರಿ ರಝಾ ಹೊ.**

ಅವರ ಪುತ್ರ ಹೇಳುತ್ತಾರೆ ಅಮ್ಮನ ನಿಧನದ ನಂತರ ನನ್ನ ಸಹೋದರಿಯರ ಬಗ್ಗೆ ಬಹಳ ಕಾಳಜಿವಹಿಸುತ್ತಿದ್ದರು ಮತ್ತು ತಮ್ಮ ಸೋಸೆಯನ್ನು ಸಹ ಮಗಳ ಹಾಗೆ ನೋಡಿಕೊಳ್ಳುತ್ತಿದ್ದರು. ಏನೆ ವಸ್ತು ತಂದರು ಅಥವಾ ಈದಿ ನೀಡಬೇಕಾದರೆ ಅವರು ಮೊಟ್ಟಮೊದಲು ತನ್ನ ಸೋಸೆಗೆ ನೀಡುತ್ತಿದ್ದರು ಅನಂತರ ನಮ್ಮೆಲ್ಲರಿಗು ನೀಡುತ್ತಿದ್ದರು. ಯಾವಾಗಲೂ ಹೇಳುತ್ತಿದ್ದರು ಅನ್ಯರ ಮಗಳನ್ನು ನಮ್ಮ ಮನೆಗೆ ತಂದಾಗ ಅವರ ಬಗ್ಗೆ ಹೆಚ್ಚಾಗಿ ಕಾಳಜಿ ವಹಿಸಬೇಕು. ನಾನು ಇದರ ಬಗ್ಗೆ ಅಲ್ಲಾಹನಿಗೆ ಉತ್ತರ ನೀಡಬೇಕಾಗಿದೆ ಎನ್ನುತ್ತಿದ್ದರು.

ಇನ್ನೊರ್ವ ಪುತ್ರಿ ಬರೆಯುತ್ತಾರೆ ನಿಜವಾಗಿಯು ಜೈಲಿನಲ್ಲಿ ಅವರು ಕಳೆದ ದಿನಗಳು ಪರಿಕ್ಷೆಯ ದಿನಗಳಾಗಿದ್ದವು. ಅಲ್ಲಾಹನ ಸಂಪ್ರೀತಿ ಪಡೆಯುತ್ತ ಹಾಗೂ ಖಿಲಾಫತ್‌ನ ಪ್ರೀತಿಯಲ್ಲಿ ಕಳೆದಿದ್ದಾರೆ. ಯಾವಾಗಲು ಅವರ ಬಾಯಿಯಿಂದ ಉಫ್ ಎಂದೂ ಸಹ ಬರಲಿಲ್ಲ. ಅವರು ಹೇಳುತ್ತಾರೆ: ಎಂದೂ ನಮಾಝ್ ಮತ್ತು ತಹಜ್ಜುದ್‌ನಲ್ಲಿ ವಿರಾಮ ಪಡಲಿಲ್ಲ ಅಥವಾ ಎಂದೂ ಕಾಯಿಲೆಯ ಕಾರಣದಿಂದನೂ ಬಿಡಲಿಲ್ಲ. ಜೈಲಿನಲ್ಲಿ ಹಿಂಸೆಯ ಕಾರಣದಿಂದ ಮೂತ್ರ ಪಿಂಡದ ತೊಂದರೆ ಉಂಟಾಗಿತ್ತು. ಆ ತೊಂದರೆಯು ಜೀವನದ ಕೊನೆಯ ಕಾಲದಲ್ಲಿ ಹೆಚ್ಚಾಯಿತು. ಉಸಿರಾಡುವ ತೊಂದರೆಯು ಅವರಿಗಿತ್ತು. ಅಂತಹ ಸಂದರ್ಭಗಳಲ್ಲಿಯು ಅವರು ಎಂದೂ ಯಾರಿಗೂ ದೂರಲಿಲ್ಲ. ಯಾವಾಗಲೂ ಶುಕರ್ ಅಲ್‌ಹಮ್‌ದುಲಿಲ್ಲಾ ಎಂದು ಹೇಳುತ್ತಾ ಇದ್ದರು.

ಮತ್ತೋರ್ವರು ಹೇಳುತ್ತಾರೆ ಅವರು ಎಲ್ಲಿಯ ತನಕ ಯೋಚಿಸಿದ್ದರು ಎಂದರೆ ನನಗೆ ಈಗ ಎಂಬತ್ತೇಳು ಎಂಭತ್ತೆಂಟು ವರ್ಷ ಆಯಸ್ಸಾಗಿದೆ ಸಮಯ ಹೇಗಿರುವುದು ಎಂದು ಗೊತ್ತಿಲ್ಲ. ನಾನು ನಿಧನ ಹೊಂದಿದಾಗ ನನಗೆ ಪಾಕಿಸ್ತಾನಕ್ಕೆ ಕರೆದುಕೊಂಡು ಹೋಗಿ. ಅದರೊಂದಿಗೆ ಪುತ್ರಿಯರಿಗೆ ಹೇಳಿದ್ದರು: ನಾನು ನಿಮಗಾಗಿ ಟಿಕೆಟ್‌ನ ಶುಲ್ಕವನ್ನು ಸಹ ಜೋಪಾನವಾಗಿಟ್ಟಿದ್ದೇನೆ ನೀವೆಲ್ಲರು ನನ್ನ ಮೃತದೇಹದ ಜೋತೆಗೆ ಪಾಕಿಸ್ತಾನಕ್ಕೆ ಬನ್ನಿ. ನಿಮ್ಮ ಪತಿಯರ ವೆಚ್ಚದಲ್ಲಿ ಅಲ್ಲ ನಿಮ್ಮ ತಂದೆಯ ವೆಚ್ಚದಲ್ಲಿ. ಅವರ ಮೃತದೇಹದೊಂದಿಗೆ ಬನ್ನಿ ಎಂದು ಹೇಳಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಮೃತದೇಹ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಆದ್ದರಿಂದ ಅವರ ಮೃತದೇಹವನ್ನು ಅಮಾನತ್ತಾಗಿ ದಫನ್ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಯಾವಾಗಾದರೂ ಸವಲತ್ತಾದರೆ ಅವರನ್ನು ಅವರ ಕೊನೆಯ ಆಸೆಯ ಮೆರೆಗೆ ಅವರನ್ನು ಕಳುಹಿಸಲಾಗುವುದು. ಇನ್‌ಶಾಅಲ್ಲಾಹ್.

ಅವರ ಓರ್ವ ಸಹೋದರಿಯ ಮಗ ರಾನಾ ಶಬ್ಬಿರ್ ಸಾಹೆಬ್ ತಾಹೆರ್ ಹಾರ್ಟ್‌ನಲ್ಲಿದ್ದಾರೆ ಅವರು ಹೇಳುತ್ತಾರೆ: ಅವರು (ಅಸೀರ್) ಜೈಲಿನಲ್ಲಿದ್ದಾಗ ನಾನು ಅವರಿಗೆ ಅನೇಕ ಬಾರಿ ಭೇಟಿ ಆಗಿದ್ದೇನೆ. ನಾವು ಅವರಿಗೆ ಜೈಲಿನಲ್ಲಿ ಸಾಮಾನು ಕೊಡಲು ಹೋದಾಗ ನಮಗೆ ಬಹಳ ಚಿಂತೆ ಆಗುತ್ತಿತ್ತು ಆದರೆ ಅವರು ನಮಗೆ ಯಾವಾಗಲು ತಾಳ್ಮೆ ವಹಿಸಲು ಮತ್ತು ದುಆ ಮಾಡುತ್ತಿರಲು ಹೇಳುತ್ತಿದ್ದರು. ಅವರು ಬಹಳ ಉದಾತ್ತ ವ್ಯಕ್ತಿ ಹಾಗೂ ಬಹಳ ತಾಳ್ಮೆ ವಹಿಸುವ ವ್ಯಕ್ತಿ ಆಗಿದ್ದರು. ಅದೇ ರೀತಿ ಅವರ ಸಹೋದರನ ಪುತ್ರಿ ಬರೆಯುತ್ತಾರೆ 1980ರ ತನಕ **ಖಿಸ್ರೆ ಖಿಲಾಫತ್**‌ನಲ್ಲಿದ್ದರು ನಾವು ಜಲ್‌ಸಕ್ಕೆ ಹೋದಾಗ ಕೆಲವೊಮ್ಮೆ ಒಂದೆರಡು ಅಹ್ಮದೀಯೇತರ ಕುಟುಂಬವು ನಮ್ಮೊಂದಿಗೆ ಜಲ್ಸಕ್ಕೆ ಆಗಮಿಸುತ್ತಿದ್ದರು. ಆಗ ಅವರು ನಮಗೆ ಯಾವಾಗಲೂ ಹೇಳುತಿದ್ದರು ಅತಿಥಿಗಳನ್ನು ಸರಿಯಾಗಿ ನೋಡಿಕೊಳ್ಳಿರಿ. ಉಣ್ಣುವುದರಲ್ಲಿ ಹಾಗೂ ಮಲಗುವುದರಲ್ಲಿ ಕೊರತೆ ಆಗಬಾರದು. ಮನೆಯಲ್ಲಿ ಜಾಗದ ಕೊರತೆ ಆಗುತ್ತಿದ್ದರೆ ಅವರು ಸ್ವತಃ ತಮ್ಮ ಮಡದಿ ಮಕ್ಕಳೊಂದಿಗೆ ಸ್ಟೋರ್ ಅಥವಾ ಕಿಚನ್‌ನಲ್ಲಿ ಮಲಗಿ ಅತಿಥಿಯರನ್ನು ತಮ್ಮ ಕೊಠಡಿಗಳಲ್ಲಿ ಉತ್ತಮವಾದ ಜಾಗದಲ್ಲಿ ಮಲಗಿಸುತ್ತಿದ್ದರು. ಅವರು ಹೇಳುತ್ತಿದ್ದರು ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅತಿಥಿಗಳಾಗಿದ್ದಾರೆ ಅವರಿಗೆ ತೊಂದರೆ ಆಗಬಾರದು. ಅವರ ಇನ್ನೋರ್ವ ಸಹೋದರಿಯ ಪುತ್ರ ಹೇಳುತ್ತಾರೆ: ಒಮ್ಮೆ ನಾನು ಅವರನ್ನು ಜೈಲಿನಲ್ಲಿ ಬೇಟಿ ಆಗಲು ಹೋಗಿದ್ದೆ. ಆಗ ನಾನು ಆ ಘಟನೆಯ ಬಗ್ಗೆ ಕೇಳಲು ಇಚ್ಚಿಸಿದ್ದೇ. ಅವರು ಬಹಳ ಆವೇಶಭರಿತರಾಗಿ ಹೇಳಿದರು ಮಗನೇ!! ಪ್ರತಿಯೊಂದು ಸಂದರ್ಭದಲ್ಲಿಯೂ ಕಲಿಮವನ್ನು ರಕ್ಷಿಸಕೊಳ್ಳಬೇಕು. ಇದರಲ್ಲಿ ನಿಮ್ಮ ಜೀವವೇ ಹೋದರು ಸರಿ. ಇವರು ಹೇಳುತ್ತಾರೆ ನಾನು ಅವರು ಮಾತು ಕೇಳಿದಾಗ ನನಗೆ ಈ ಮಾತುಗಳು ಮನುಷ್ಯನ ಮಾತುಗಳಲ್ಲ ಒಂದು ದೇವಧೂತನ ಮಾತುಗಳಾಗಿರಬಹುದು ಎಂದು ಭಾಸವಾಗುತ್ತಿತ್ತು. ಬಹಳ ಧೈರ್ಯವಂತರು, ಕಲಿಮವನ್ನು ರಕ್ಷಿಸಿಕೊಳ್ಳುವವರು, ಖಿಲಾಫತ್‌ನ ಪ್ರೇಮಿ ಹಾಗೂ ಯಾರಿಗೂ ಹೆದರದ ಅಹ್ಮದಿ ಮುಸ್ಲಿಮರಾಗಿದ್ದರು.

ಇವರು ಹೇಳುತ್ತಾರೆ ನಾನು ಬೆಲ್‌ಜಿಯಮ್‌ನಿಂದ ಲಂಡನ್ನಿಗೆ ಬಂದಾಗ ಅವರು ಹೇಳಿದರು ಖಿಲಾಫತ್‌ನೊಂದಿಗೆ ಅಂಟಿಕೊಳ್ಳಬೇಕು. ಇಲ್ಲಿ ಖಿಲಾಫತ್‌ನ ಕಾರಣದಿಂದ ಬಂದಿದ್ದೀರಿ ಎಂದರೆ ಖಲೀಫರ ಪ್ರತಿಯೊಂದು ಮಾತುಗಳನ್ನು ಅನುಸರಿಸಬೇಕು ಇಲ್ಲವಾದರೆ ಏನು ಪ್ರಯೋಜನವಿಲ್ಲ. ಕ್ರಮಬದ್ಧವಾಗಿ ನಮಾಝುಗಳನ್ನು ನಿರ್ವಹಿಸಬೇಕು ಮತ್ತು ಯಾವುದೇ ವಿಷಯದಲ್ಲಿ ಹೆದರದೆ ಅಲ್ಲಾಹನ ಆಸ್ಥಾನದಲ್ಲಿ ಬಾಗಬೇಕು. ಸುಳ್ಳುಗಾರ ಮತ್ತು ಕಪಟ ವಿಶ್ವಾಸದಿಂದ ಬಹಳ ಬೇಸರಗೊಳ್ಳುತ್ತಿದ್ದರು. ತಮ್ಮ ಡ್ಯುಟಿಯ ಬಗ್ಗೆ ಬಹಳ ಚಿಂತೆಯಲ್ಲಿರುತ್ತಿದ್ದರು. ಯಾವಾಗಾಲಾದರು ಅನಾರೋಗ್ಯವಾದಾಗ ಮನೆಯವರು ಇಂದು ಮನೆಯಲ್ಲಿಯೇ ಆರಾಮವಾಗಿರಿ ಎಂದರೆ ಇಲ್ಲ ನಾನು ಆರೋಗ್ಯವಂತನಾಗಿದ್ದೇನೆ ಎಂದು ಹೇಳುತ್ತಿದ್ದರು. ಇದು ನನ್ನ ಬೋನಸ್ ದಿನಗಳಾಗಿವೆ. ಇಳಿ ವಯಸ್ಸಿನಲ್ಲಿ ನನಗೆ ಸೇವೆಯ ಭಾಗ್ಯ ಲಭಿಸುತ್ತಿದೆ ನನಗೆ ಸೇವೆ ಸಲ್ಲಿಸಲು ಬಿಡಿ ಎನ್ನುತ್ತಿದ್ದರು.

ಇಲ್ಯಾಸ್ ಮುನೀರ್ ಸಾಹೆಬ್ ಇವರು ರಾನಾ ಸಾಹೆಬ್ ಅವರೊಂದಿಗೆ ಜೈಲಿನಲ್ಲಿದ್ದವರು ಅವರು ಬರೆಯುತ್ತಾರೆ: ರಾನಾ ಸಾಹೆಬ್ ಅವರೊಂದಿಗೆ ನನ್ನ ಜೀವನದ ಒಂದು ಭಾಗ ಕಳೆದಿದ್ದೇನೆ ಆದರೆ ಈ ಕೋನೆಯ ಹೊತ್ತು ಅವರನ್ನು ಕಾಣುವ ಭಾಗ್ಯ ಲಭಿಸುತ್ತಿಲ್ಲ ಇದರ ಬಗ್ಗೆ ನನಗೆ ಬಹಳ ದುಃಖವಿದೆ. ಅವರೊಂದಿಗೆ 10 ವರ್ಷಗಳ ಕಾಲ ಜೈಲಿನಲ್ಲಿ ಕಳೆದಿದ್ದೇನೆ. ನಾನು ಅವರಿಗೆ ಒಂದು ದಿವಸವೂ ಧೈರ್ಯ ಕಳೆದುಕೊಳ್ಳುವುದನ್ನು ಕಾಣಲಿಲ್ಲ ಎಲ್ಲಿಯ ತನಕ ಎಂದರೆ ಮಿಲಿಟರಿ ಸರ್ವಾಧಿಕಾರಿಯು ಅವರ ಬಗ್ಗೆ ಜೀವಾವಧಿ ಶಿಕ್ಷೆಯ ನಿರ್ಣಯ ನೀಡಿದಾಗಲೂ ಅವರು ಮುಗುಳುನಗೆ ನಗುತ್ತಾ ಅದನ್ನು ಸ್ವೀಕರಿಸಿದರು. ಮನೆಯಲ್ಲಿ ಹೆಚ್ಚು ಮಕ್ಕಳಿದ್ದವು ಅವೂ ಚಿಕ್ಕ ಚಿಕ್ಕ ಪ್ರಾಯದ ಮಕ್ಕಳಿದ್ದರು. ಜೀವನ ಸಾಗಿಸಲು ಯಾವುದೇ ಉತ್ತಮ ಮಾರ್ಗವಿರಲಿಲ್ಲ ಆದರೆ ಅಲ್ಲಾಹನ ಮೇಲೆ ಭರವಸೆ ಇತ್ತು. ಧರ್ಮ ಸೇವೆಯ ಹುಮ್ಮಸ್ಸಿತ್ತು. ಜಮಾಅತ್ತಿನ ಗೌರವದ ಬಗ್ಗೆ ಚಿಂತೆ ಇತ್ತು. ಯಾವಾಗಾದರೂ ಅವರು ಚಿಂತೆಯಲ್ಲಿರುತ್ತಿದ್ದರೆ ಅವರು ಕೇವಲ ಇಷ್ಟು ಹೇಳುತ್ತಿದ್ದರು ಅವರ ಇರಾದೆ ಬಹಳ ಭಯಾನಕವಾಗಿದ್ದಾವೆ. ಅಲ್ಲಾಹನು ಮಾತ್ರ ಅದರಿಂದ ನಮ್ಮನ್ನು ರಕ್ಷಿಸಬಹುದು ಎನ್ನುತ್ತಿದ್ದರು. ಪುತ್ರಿಯರ ವಿವಾಹಗಳು ಸಹ ಅವರು ಜೈಲಿನಲ್ಲಿದ್ದಾಗಲೇ ಆಗಿತ್ತು.

ಇಲ್ಯಾಸ್ ಮುನೀರ್ ಸಾಹೆಬ್ ಘಟನೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತಾ ಹೇಳುತ್ತಾರೆ: ಬಲ್ವಾಯಿಯವರು ಮಸೀದಿಯ ಮೇಲೆ ಆಕ್ರಮಿಸಿ ಕಲಿಮ ಹಾಗೂ ಪವಿತ್ರ ಖುರ್‌ಆನಿನ ಆಯತ್‌ಗಳು ಹಾಗೂ ಹದೀಸ್‌ಗಳನ್ನು ಅಳಿಸುತ್ತಿದ್ದರು. ಆ ಸನ್ನಿವೇಶ ನಾನು ಎಂದೂ ಮರೆಯುವುದಿಲ್ಲ ರಾನಾ ಸಾಹೆಬರು ಬಹಳ ಜೋರಾದ ಧ್ವನಿಯಲ್ಲಿ ಹೇಳಿದರು ಕಲಿಮವನ್ನು ಅಳಿಸಲು ನೀವು ಯಾರು? ನಿಮಗೆ ಈ ಅಧಿಕಾರ ಯಾರ ನೀಡಿದ್ದಾರೆ ಎಂದು ಕೇಳಿದರು. ನಾನು ಎಂದೂ ನಿಮಗೆ ಹೀಗೆ ಉರ್ದುವಿನಲ್ಲಿ ಮಾತನಾಡಿದ್ದನ್ನು ಕಾಣಲಿಲ್ಲ. ಆದರೆ ಆ ಸಂದರ್ಭದಲ್ಲಿ ಬಹಳ ದೊಡ್ಡ ಧ್ವನಿಯಲ್ಲಿ ಹೇಳಿದರು ಮತ್ತು

ಅವರೊಬ್ಬರೇ ಸುಮಾರು 30 ಪೊಲೀಸ್‌ರನ್ನು ಮಸೀದಿಯಲ್ಲಿ ಬಚ್ಚಿಟ್ಟುಕೊಳ್ಳಲು ಹಾಗೂ ಓಡಿ ಹೋಗುವ ಹಾಗೆ ಮಾಡಿದರು. ಅವರು ಬರೆಯುತ್ತಾರೆ ರಾನಾ ಸಾಹೇಬರು ಇದು ಬಹಳ ಧೈರ್ಯದಿಂದ ಮಾಡಿದರು. ಇದಲ್ಲದೆ ಪೊಲೀಸ್ ಅಧೀಕಾರಿಗಳು ಕೇಳಿದರು ಯಾರು ಫೈರಿಂಗ್ ಮಾಡಿರುವುದು ಎಂದು ಆಗ ಅವರು ಬಹಳ ಧೈರ್ಯದಿಂದ ನಾನು ಮಡಿದೆನು ಎಂದರು. ತದನಂತರ ಅವರ ಮೇಲೆ ಬಹಳ ತೊಂದರೆಗಳನ್ನು ನೀಡಲಾಯಿತು ಮತ್ತು ಜಮಾಅತ್ತಿನ ಬೇರೆ ಹುದ್ದೆದಾರ ಹೆಸರು ಹೇಳಲು ಬಹಳ ಒತ್ತಾಯ ಮಾಡಿದರು. ಆದರೆ ಅವರು ಯಾರ ಹೆಸರು ಹೇಳಲಿಲ್ಲ. ಇದು ನಿಜವಾಗಿತ್ತು ಏಕೆಂದರೆ ಯಾವುದೇ ಹುದ್ದೆದಾರರಿಗೆ ಅವರ ಬಳಿ ತಮ್ಮ ಬಂದೂಕು ಇರುವುದರ ಬಗ್ಗೆ ಅರಿವಿರಲಿಲ್ಲ. ಅನಂತರ ನ್ಯಾಯಾಲದಲ್ಲಿ ಅಥವಾ ಮಿಲಿಟರಿ ನ್ಯಾಯಾಲಯದಲ್ಲಿ ಯಾವುದೇ ರೀತಿಯು ಒತ್ತಾಯುದಡಿ ಬರಲಿಲ್ಲ. ಹೇಳಿಕೆಯುಲ್ಲಿಯು ಹಾಗೂ ಬರವಣಿಗೆಯಲ್ಲಿಯೂ ಸಹ ಅವರು ಬಹಳ ಸ್ಪಷ್ಟವಾಗಿ ಅವರೆ ಫೈರಿಂಗ್ ಮಾಡಿರುವುದು ಎಂದು ಬಹಳ ಧೈರ್ಯದಿಂದ ಹೇಳಿದರು. ಈ ಧೈರ್ಯದ ಹಾಗೂ ನಿಷ್ಠೆಯ ಕಾರಣದಿಂದ ಅಲ್ಲಾಹನು ಅವರಿಗೆ ಖಿಲಾಫತ್‌ನ ಆಸ್ಥಾನದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ನೀಡಿದನು.

ಮತ್ತೆ ಇಲ್ಯಾಸ್ ಮುನೀರ್ ಸಾಹೆಬ್ ಬರೆಯುತ್ತಾರೆ: ಜೈಲಿನಲ್ಲಿದ್ದಾಗ ಅವರಿಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲ) ರವರು ರಾನಾ ನಈಮುದ್ದೀನ್ ಸಾಹಿಬರಿಗೆ ಪತ್ರಗಳನ್ನು ಬರೆಯುತ್ತಿದ್ದರು. ಮತ್ತು ಅವರ ತಂದೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲ) ರವರ ಖುತ್‌ಬಗಳು ತರುತ್ತಿದ್ದರು, ಆ ಕಾಲದಲ್ಲಿ ಎಂ.ಟಿ.ಎ. ನ ವ್ಯವಸ್ಥೆ ಇರಲಿಲ್ಲ. ಖುತ್‌ಬಗಳು ಬರವಣಿಗೆಯ ರೂಪದಲ್ಲಿ ಬರುತ್ತಿದ್ದವು. ಅವರು ಹೇಳುತ್ತಾರೆ ರಾನಾ ಸಾಹೆಬ್‌ರವರು ನನಗೆ ತಮ್ಮೊಂದಿಗೆ ಕೂರಿಸಿಕೊಂಡು ಖುತ್‌ಗಳು ಕೇಳಿಸುತ್ತಿದ್ದರು.

ಮತ್ತೆ ಹೇಳುತ್ತಾರೆ: ಯಾವ ನಮಾಝ್ ಬಾಜಮಾಅತ್‌ನ ವ್ಯವಸ್ಥೆ ಆಗುತ್ತಿತ್ತು ಆ ನಮಾಝ್‌ಗಳನ್ನು ನಾವು ಬಾಜಮಾಅತ್ ನಿರ್ವಹಿಸುತ್ತಿದ್ದೆವು. ಕೆಲವೊಮ್ಮೆ ಜೈಲಿನಲ್ಲಿದ್ದ ಅನ್ಯ ಅಹ್ಮದಿಯರನ್ನು ಸಹ ಕರೆಸಿಕೊಳ್ಳುತ್ತಿದ್ದೆವು. ಪವಿತ್ರ ಮಾಸ ರಮಝಾನಿನ ಬಗ್ಗೆ ಹೇಳಬೇಕಾದರೆ ಒಮ್ಮೆ ನಮಗೆ ಈ ಪವಿತ್ರ ಮಾಸ ಮೇ, ಜೂನ್ ಹಾಗೂ ಜುಲೈ ತಿಂಗಳಲ್ಲಿ ಬಂದವು ಆ ತಿಂಗಳುಗಳಲ್ಲಿ ಬಹಳ ಕಠಿಣವಾದ ದಿನಗಳಾಗಿದ್ದವು ಆದರೂ ರಾನಾ ಸಾಹೇಬರು ನಮ್ಮೆಲ್ಲರಿಗಿಂತ ಹಿರಿಯರಾದರೂ ಸಹ ಈ ಪವಿತ್ರ ಮಾಸದ ಸಂಪೂರ್ಣ ಉಪವಾಸಗಳು ನಿರ್ವಹಿಸುತ್ತಿದ್ದರು. ಅವರಲ್ಲಿ ಅಸಾಮಾನ್ಯ ಧೈರ್ಯವಿತ್ತು. ಎಲ್ಲಾ ಸಂದರ್ಭಗಳನ್ನು ಬಹಳ ಮುಗುಳುನಗು ನಗುತ್ತಾ ಅನುಭವಿಸುತ್ತಿದ್ದರು.

ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲ) ರವರ ಒಂದು ಪತ್ರವನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಈ ಪತ್ರವನ್ನು ರಾನಾ ನಯೀಮುದ್ದೀನ್ ಸಾಹೇಬರಿಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲ) ರವರು ಸೆಪ್ಟೆಂಬರ್ 1986ರಲ್ಲಿ ಬರೆದಿದ್ದರು. ಅದರ ಸ್ವಲ್ಪ ಭಾಗ ಹೀಗಿದೆ: ಅತ್ಯುನ್ನತ ಮಟ್ಟದ ವಿಶ್ವಾಸದ ಯಾವ ಬಲಿಷ್ಠ ಬಂಡೆಗಲ್ಲಿನ ಮೇಲೆ ತಾವು ನಿಂತಿರುವಿರೋ ಅದು ಅಭಿಮಾನಾರ್ಹವಾಗಿದೆ. ಅಲ್ಲಾಹನಿಗೆ ಸೇರಿದವರಿಗೆ ಅತ್ಯುನ್ನತ ಸ್ಥಾನ ಪಡೆಯುವ ಮೊದಲು ಈ ರೀತಿಯ ಕಠಿಣತೆಗಳನ್ನು ದಾಟಿ ಹೋಗಲೇ ಬೇಕಾಗುತ್ತದೆ. ನಿಮ್ಮಂತಹವರ ಭಾಗ್ಯದ ಬಗ್ಗೆ ಅಸೂಯೆದೋರುತ್ತದೆ. ವೃಕ್ಷ ಅದರ ಫಲದಿಂದ ಗುರುತಿಸಲ್ಪಡುತ್ತದೆ. ನೀವೆಲ್ಲರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಚ್ಚ ಹಸುರಾದ ಶಾಖೆಗಳೂ ಸಿಹಿಯಾದ ಹಣ್ಣುಗಳೂ ಆಗಿರುವಿರಿ. ಅಲ್ಲಾಹನು ಅದನ್ನು ವ್ಯರ್ಥಗೊಳಿಸಲಾರನು. ಅಲ್ಲಾಹನು ತನ್ನ ದೇವದೂತರ ಮೂಲಕ ನೆರವು ನೀಡಲಿ. ಶತ್ರುವಿನ ಬಿಗಿ ಮುಷ್ಠಿಯಿಂದ ನಿಮಗೆ ವಿಮೋಚನೆ ನೀಡುವವನಾಗಲಿ. ಅಲ್ಲಾಹ್ ನಿಮ್ಮ ಜೊತೆಗಿರುವವನಾಗಲಿ.

ಮುಬಾರಕ್ ಸಿದ್ದೀಖಿ ಸಾಹೆಬ್ ಹೇಳುತ್ತಾರೆ: ನಾನು ಒಮ್ಮೆ ರಾನಾ ಸಾಹೆಬ್ ಅವರೊಂದಿಗೆ ಅವರು ಜೈಲಿನಲ್ಲಿದ್ದ ಕಾಲದ ಬಗ್ಗೆ ಪ್ರಶ್ನಿಸಿದೆ ಮತ್ತು ಜೈಲಿನ ತೊಂದರೆಗಳ ಬಗ್ಗೆ ಪ್ರಸ್ತಾಪಿಸಿದಾಗ ಅವರು ಮುಗುಳು ನಗುತ್ತಾ ಹೇಳಿದರು ನಾವು ಅಹ್ಮದಿಯರ ಜೀವನವೂ ಅಲ್ಲಾಹನಿಗಾಗಿರುತ್ತದೆ, ರಸೂಲುಲ್ಲಾಹ್(ಸ) ಹಾಗೂ ಖಲೀಫರಿಗೆ ವಿಧೇಯರಾಗಿರುತ್ತದೆ. ಆದ್ದರಿಂದ ನನಗೆ ಎಂದೂ ಯಾವುದೇ ತೊಂದರೆ ಅನಿಸಲಿಲ್ಲ. ನಾನು ಪ್ರತಿಯೊಂದು ಕ್ಷಣದಲ್ಲಿಯ ಅಲ್ಲಾಹನ ಮರ್ಜಿಯ ಮೆರೆಗೆ ಇರುತ್ತೇನೆ. ನಿಸ್ಸಂದೇಹವಾಗಿಯು ಅವರು ಕೊನೆಯವರೆಗೂ ಅಲ್ಲಾಹನ ಒಪ್ಪಿಗೆಯ ಮೆರೆಗೆ ತಮ್ಮ ಜೀವನವನ್ನು ಸಾಗಿಸಿದರು. ನಾನು ಅವರಿಗೆ ಕೇಳಿದಾಗಲೆಲ್ಲ ಅವರು ಅಲ್‌ಹಮ್‌ದುಲಿಲ್ಲಾಹ್ ಎಂದು ಹೇಳುತ್ತಿದ್ದರು. ಆಸ್ಪತ್ರಯಿಂದ ಬಂದಾಗಲೂ ಮಾರನೇಯ ದಿವಸ ಇಲ್ಲಿಗೆ ಬಂದು ಈಗ ನಾನು ಆರೋಗ್ಯವಂತನಾಗಿದ್ದೇನೆ ಎಂದು ಹೇಳುತ್ತಿದ್ದರು. ಅದರೊಂದಿಗೆ ನನಗೂ ಸಹ ದುಆ ಮಾಡುತ್ತಿದ್ದರು.

ನಾನು ಮುಂಚೆ ಹೇಳಿದ ಹಾಗೆ ವೈದ್ಯರೂ ಸಹ ಆಶ್ಚರ್ಯಚಕಿತರಾಗುತ್ತಿದ್ದರು. ಒಮ್ಮೆ ವ್ಯಕ್ತಿಯ ಕಾಲು ಊದಿಕೊಂಡರು ಅವರು ಹೊರಗೆ ಹೋಗಲು ಸಾಧ್ಯವಿಲ್ಲ ಆದರೆ ಇವರು ಇಲ್ಲಿ ಬಂದು ಗಂಟೆಗಟ್ಟಲೆ ನಿಂತು ಡ್ಯೂಟಿ ನೀಡುತ್ತಿದ್ದರು. ವೈದ್ಯರು ಆಶ್ಚರ್ಯಗೊಳ್ಳುತ್ತಿರ ಬಹುದು ಆದರೆ ಅವರಿಗೆ ಅರಿವಿಲ್ಲ ಇದು ಖಲೀಫರೊಂದಿಗೆ ಇದ್ದ ಪ್ರೀತಿ ಎಂದು. ಮತ್ತು ಖಲೀಫರ ಸಮೀಪ ಇರಬೇಕೆಂಬ ಆಸೆ ಆಗಿತ್ತು ಅದು ಅವರನ್ನು ಮಸೀದಿಗೆ ಎಳೆದುಕೊಂಡು ಬರುತ್ತಿತ್ತು. ನಾನು ಅವರ ಚಹರೆಯ ಮೇಲೆ ಯಾವಾಗಲೂ ಸಹನೆಯನ್ನು ಕಂಡಿದ್ದೇನೆ ಮತ್ತು ಖಲೀಫರೊಂದಿಗೆ ಪ್ರೀತಿ ಕಂಡಿದ್ದೇನೆ. ಅಲ್ಲಾಹನು ಅವರೊಂದಿಗೆ ಪರಲೋಕದಲ್ಲಿಯೂ ಪ್ರೀತಿ ಮತ್ತು ವಾತ್ಸಲ್ಯದಿಂದ ವರ್ತಿಸುವವನಾಗಲಿ. ತನಗೆ ಪ್ರಿಯರಾದವರ ಹೆಜ್ಜೆಗಳ ಸಮೀಪ ಸ್ಥಳ ನೀಡುವವನಾಗಲಿ.

ನನಗೆ ಬಾಲ್ಯದಿಂದಲೇ ಅವರ ಪರಿಚಯವಿದೆ. ಅವರು ನಮ್ಮೊಂದಿಗೆ ಬಹಳ ವಾತ್ಸಲ್ಯ ಪೂರ್ವಕವಾಗಿ ವರ್ತಿಸುತ್ತಿದ್ದರು. ಖಿಲಾಫತ್ ನಂತರ ಅವರು ನನ್ನೊಂದಿಗೆ ವರ್ತಿಸಿದ ರೀತಿ ಬೇರೆಯೇ ಆಗಿತ್ತು. ಅವರ ಮಕ್ಕಳು ನಿಷ್ಠಾವಂತರಾಗಿ ತಮ್ಮ ಪಿತನ ಹೆಜ್ಜೆ ಗುರುತುಗಳಲ್ಲಿ ಚಲಿಸುವವರಾಗುವಂತೆ ಅಲ್ಲಾಹನು ಮಾಡಲಿ. ಇನ್‌ಶಾ ಅಲ್ಲಾಹ್ ಮುಂದೆ ಯಾವಾಗಲಾದರೂ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು.

ಕೊನೆಗೆ ಪುನಃ ನಾನು ಇಂದಿನ ಕಾಲದಲ್ಲಿ ಲೋಕದಲ್ಲಿ ಹರಡಿರುವ ರೋಗದ ಬಗ್ಗೆ ಹೇಳಲು ಇಚ್ಛಿಸುತ್ತೇನೆ. ಕೆಲವು ಅಹ್ಮದಿಯರು ರೋಗ ಬಾಧಿತರಾಗಿದ್ದಾರೆ. ಅವರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರೆಲ್ಲರಿಗೂ ಪರಿಪೂರ್ಣವಾಗಿ ರೋಗಶಮನ ನೀಡಲಿ. ನಮ್ಮನ್ನು ಅಲ್ಲಾಹನು ಅವನ ಸಂಪ್ರೀತಿಯ ಮಾರ್ಗದಲ್ಲಿ ಚಲಿಸುವವರನ್ನಾಗಿ ಮಾಡಲಿ. ಸರಿಯಾದ ರೀತಿಯಲ್ಲಿ ಅವನ ಆರಾಧನೆ ಮಾಡಲು ಹಾಗೂ ಹುಖೂಖುಲ್ ಇಬಾದ್ (ದಾಸರ ಹಕ್ಕುಗಳನ್ನು) ಈಡೇರಿಸುವ ಭಾಗ್ಯ ನಮಗೆ ಅಲ್ಲಾಹನು ದಯಪಾಲಿಸಲಿ. ಬಹಳ ಬೇಗನೆ ಈ ಮಹಾಮಾರಿ ನಮ್ಮಿಂದ ದೂರ ಸರಿಸಲಿ. ಲೋಕಕ್ಕೆ ಸಹ ಬುದ್ಧಿ ಮತ್ತು ವಿವೇಕ ದಯಪಾಲಿಸುವವನಾಗಲಿ. ಲೋಕದ ಜನರು ಏಕ ದೇವನನ್ನು ಗುರುತಿಸುವವರೂ ಅವನನ್ನು ಆರಾಧಿಸುವವರೂ ಆಗಲಿ. ಅವರು ಏಕದೇವ ವಿಶ್ವಾಸವನ್ನು ಮನವರಿಕೆ ಮಾಡುವವರಾಗಲಿ. ಅಲ್ಲಾಹನು ಎಲ್ಲರ ಮೇಲೆಯೂ ಕಾರುಣ್ಯ ದೋರುವವನಾಗಲಿ – ಆಮೀನ್.

**********************

### ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ಪವಿತ್ರ ರಮಝಾನ್ ತಿಂಗಳಿಗೆ ತಹರೀಕ್ ಜದೀದಿನೊಡನೆ ಘನಿಷ್ಠ ಸಂಬಂಧವಿದೆ.

ತಹ್‌ರೀಕ್ ಜದೀದ್ ಸ್ಥಾಪಕರಾದ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ)(ರ) ಅವರು ಪವಿತ್ರ ರಮಝಾನ್ ತಿಂಗಳ ಮತ್ತು ತಹ್‌ರೀಕ್ ಜದೀದ್‌ಗೆ ಇರುವ ಅನ್ಯೋನ್ಯ ಸಂಬಂಧಗಳ ಕಡೆಗೆ ನಮ್ಮ ಗಮನ ಸೆಳೆಯುತ್ತಾ ಹೇಳುತ್ತಾರೆ. ರಮಝಾನಿನಿಂದ ಲಾಭಾನ್ವಿತರಾಗಬೇಕಾದರೆ ತಹ್‌ರೀಕ್ ಜದೀದ್‌ನ ರೀತಿಯಲ್ಲಿ ನಡೆದುಕೊಳ್ಳಿರಿ. ತಹ್‌ರೀಕ್ ಜದೀದನ್ನು ಬಲಗೊಳಿಸಲು ಬಯಸುವವರಾದರೆ ಉಪವಾಸಗಳಿಂದ ಲಾಭಾನ್ವಿತರಾಗಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವನ ನಡೆಸುವುದು, ಶ್ರಮ ಪಡುವುದು ಮತ್ತು ತ್ಯಾಗ ಭಾವನೆಗಳನ್ನು ರೂಢಿಸಿಕೊಳ್ಳುವುದು. ಈ ಪಾಠ ಕಲಿಸಿಕೊಡಲು ರಮಝಾನ್ ಬರುತ್ತದೆ. ಆದುದರಿಂದ ಯಾವ ಉದ್ದೇಶಕ್ಕಾಗಿ ರಮಝಾನ್ ಬಂದಿದೆಯೋ ಆ ಉದ್ದೇಶವನ್ನು ಸಾಧಿಸಲು ಪ್ರಯತ್ನ ಮಾಡಿರಿ. ಪ್ರತಿಯೊಬ್ಬ ವ್ಯಕ್ತಿ ಪ್ರಯತ್ನ ಮಾಡಬೇಕು. ಅವನ ರಮಝಾನ್ ತಹ್‌ರೀಕ್ ಜದೀದ್ ಆಗಿರಬೇಕು. ತಹ್‌ರೀಕ್ ಜದೀದ್ ರೀತಿಯಲ್ಲಿ ಅವನ ರಮಝಾನ್ ಆಗಿರಬೇಕು. ರಮಝಾನ್ ನಮ್ಮ ಆತ್ಮ ವ್ಯಾಮೋಹವನ್ನು ತ್ಯಜಿಸುವಂತಾಗಿರಬೇಕು. ನಾನು ನಿಮಗೆ ರಮಝಾನಿನಿಂದ ಲಾಭಾನ್ವಿತರಾಗಲು ಹೇಳಿದ ಉದ್ದೇಶ ವಾಸ್ತವದಲ್ಲಿ ತಹ್‌ರೀಕ್ ಜದೀದ್‌ನ ಧ್ಯೇಯೋದ್ದೇಶಗಳನ್ನು ರಮಝಾನಿನ ಪ್ರಕಾಶದಲ್ಲಿ ಅರಿಯಬೇಕು ಎಂಬುದಾಗಿದೆ. ನಾನು ನಿಮಗೆ ತಹ್‌ರೀಕ್ ಜದೀದ್ ಕಡೆ ಗಮನಹರಿಸಲು ಹೇಳಿದ ಉದ್ದೇಶವು ರಮಝಾನಿನ ಧ್ಯೇಯೋದ್ದೇಶಗಳು ಮನದಲ್ಲಿರಲಿ ಎಂದಾಗಿದೆ. ಸರಿಯಾದ ತ್ಯಾಗ ಮತ್ತು ನಿರಂತರ ತ್ಯಾಗ ನಿಮ್ಮ ಅಭ್ಯಾಸವಾಗಿರಲಿ. ಯಾವ ರಮಝಾನ್ ನಿಜವಾದ ತ್ಯಾಗಗಳಿಲ್ಲದೆ ಕಳೆದು ಹೋಗುತ್ತದೆಯೋ, ಅದು ರಮಝಾನ್ ಅಲ್ಲ, ಮತ್ತು ಆತ್ಮಶುದ್ಧಿ ಪಡೆಯದೆ ಹೋದರೆ ತಹ್‌ರೀಕ್ ಜದೀದ್, ತಹ್‌ರೀಕ್ ಜದೀದ್ ಅಲ್ಲ. **(ಖುತುಬ ಜಮಅ 4 ನವೆಂಬರ್ 1938).**

ಈ ಕುರಿತು ಹುಝೂರ್(ಅಬಿಅ) 11 ನವೆಂಬರ್ 1938 ರ ಖುತುಬ ಪ್ರವಚನದ ಕೊನೆಯಲ್ಲಿ ಜಮಾಅತಿಗೆ, ತಹ್‌ರೀಕ್ ಜದೀದ್ ಚಂದಾದಾರರಿಗೆ ವಿಶೇಷವಾಗಿ ಪ್ರಾರ್ಥಿಸಲು ಒತ್ತು ನೀಡುತ್ತಾ ಹೇಳಿದರು. ಬರುವ ರಮಝಾನಿನ ಅಂತಿಮ ದಶಕ (ಅಶ್ರಾ) ವನ್ನು ಗತಿಸಿ ಹೋದ ತ್ಯಾಗಗಳಿಗೆ ಕೃತಜ್ಞತೆ ಸಲ್ಲಿಸುತ್ತ ಮತ್ತು ಭವಿಷ್ಯದಲ್ಲಿ ಹೊಸ ಚೈತನ್ಯ ಪಡೆಯಲು ವ್ಯಯ ಮಾಡಿರಿ. ಕಳೆದುಹೋದ ವರ್ಷಗಳಲ್ಲಿ ಯಾರಿಗೆ ಸಾಂಪತ್ತಿಕ ತ್ಯಾಗ ಮಾಡುವ ಭಾಗ್ಯ ದೊರೆತಿದೆಯೋ ಅವರು ಅಲ್ಲಾಹನಿಗೆ ಕೃತಜ್ಞೆ ಸಲ್ಲಿಸಲು ಪ್ರತಿಯೊಬ್ಬನು ಪ್ರಾರ್ಥನೆ ಮಾಡುವಾಗ ಅಲ್ಲಾಹನಿಗೆ ತ್ಯಾಗ ಮಾಡುವವರಿಗಾಗಿ ಪ್ರಾರ್ಥಿಸಲಿ. ಅವರು ಧರ್ಮದ ವೈಭವಕ್ಕಾಗಿ, ಧರ್ಮದ ಸ್ಥಿರತೆಗಾಗಿ ಮಾಡಿದ ತ್ಯಾಗಗಳ ಫಲವಾಗಿ ಅಲ್ಲಾಹನು ಅವರ ಮೇಲೆ ತನ್ನ ಅನುಗ್ರಹಗಳನ್ನು ಕಾರುಣ್ಯಗಳನ್ನು ದಯಪಾಲಿಸಲಿ. ಅವರಿಗೆ ತನ್ನ ಸಂಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಆಮೀನ್ **(ಅಲ್‌ಫಝಲ್ 15 ನವೆಂಬರ್ 1938 ಪುಟ 4)**

ಅಲ್ ಫಝಲ್ ಖಾದಿಯಾನ್ ದಿನಪತ್ರಿಕೆ 29 ನವೆಂಬರ್‌ನಲ್ಲಿ ಪ್ರಕಟಗೊಂಡ ಜಾಹೀರಾತಿನನ್ವಯ ನಿಷ್ಠಾವಂತ ಜಮಾಅತ್ ಬಾಂಧವರ ನೀತಿ ಹೇಗಿತ್ತೆಂದರೆ ಅವರು ಯಾವಾಗಲೂ ರಮಝಾನಿನ ಮಧ್ಯ ಭಾಗದವರೆಗೆ ತಮ್ಮ ವಾಗ್ದಾನದ ಪ್ರಕಾರ ಚಂದ ತಹ್‌ರೀಕ್ ಜದೀದ್ ಶತಪ್ರತಿಶತ ಪಾವತಿಸಿ ಅಲ್ಲಾಹನ ಅನುಗ್ರಹಗಳನ್ನು ಕಾರುಣ್ಯಗಳನ್ನು ಪಡೆಯಲು ಪ್ರಯತ್ನಪಡುತ್ತಾರೆ. ಆದುದರಿಂದ ಅಲ್ಲಾಹನ ಅಪಾರವಾದ ಕೃಪೆಯಿಂದ ಮತ್ತೊಮ್ಮೆ ನಾವು ಅಸಂಖ್ಯಾತ ಅನುಗ್ರಹ ದೈವಿಕ ಕಾರುಣ್ಯಗಳಿಗೆ ಪಾತ್ರರಾಗುವ ಪವಿತ್ರ ರಮಝಾನಿನಲ್ಲಿ ಪಾದಾರ್ಪಣೆ ಮಾಡಿದ್ದೇವೆ. ತಹ್‌ರೀಕ್ ಜದೀದ್ ಪಾವತಿಗಾರರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅವರು ತಮ್ಮ ಭವ್ಯ ಪರಂಪರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು 20 ರಮಝಾನ್ ಅಲ್ ಮುಬಾರಕ್, ಮೇ ತಿಂಗಳು 14 ರವರೆಗೆ ತಮ್ಮ ವಾದಾನುಸಾರ ಪರಿಪೂರ್ಣ ಚಂದ ಪಾವತಿಸಿ ಹುಝೂರ್(ಅಬಿಅ) ರವರ ಸ್ವೀಕಾರ್ಹ ಪ್ರಾರ್ಥನೆಗಳಿಗೆ ಪಾತ್ರರಾಗುವ ಭಾಗ್ಯ ಪಡೆಯಿರಿ. ಅಲ್ಲಾಹನು ನಮಗೆಲ್ಲರಿಗೂ ಹೆಚ್ಚು ಹೆಚ್ಚಾಗಿ ಪಾಲಿಸಲು ಭಾಗ್ಯ ದಯಪಾಲಿಸಲಿ. **ಆಮೀನ್**

ಎಲ್ಲಾ ಜಿಲ್ಲಾ ಹಾಗೂ ಸ್ಥಳೀಯ ಅಮೀರ್, ಜಮಾಅತ್ ಅಧ್ಯಕ್ಷರು, ತಹ್‌ರೀಕ್ ಜದೀದ್ ಕಾರ್ಯದರ್ಶಿ ಹಾಗೂ ಮುಬಲ್ಲಿಗ್ ಇನ್‌ಚಾರ್ಜ್ ಸಾಹೇಬರುಗಳಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ತಮ್ಮ ತಮ್ಮ ಜಮಾಅತುಗಳಲ್ಲಿ ಸಂಪೂರ್ಣ ಚಂದ ನೀಡಿದವರ ಪಟ್ಟಿಗಳು 14 ಮೇ ತಿಂಗಳಿನ ಮುಂಚಿತವಾಗಿ ಅಂಚೆಯ ಮೂಲಕ ಅಥವಾ 20 ಮೇ ವರೆಗೆ E-mail ಮೂಲಕ ವಕಾಲತ್ ಮಾಲ್ ತಹರೀಕ್ ಜದೀದ್ ಖಾದಿಯಾನ್ ಕಳುಹಿಸಿಕೊಡಲು ವಿನಂತಿಸಲಾಗಿದೆ. ಈ ಪ್ರಯುಕ್ತ ಎಲ್ಲ ಜಮಾಅತುಗಳ ಪಟ್ಟಿಗಳು ಒಟ್ಟುಗೂಡಿಸಿ 29 ರಂಝಾನಿನಲ್ಲಿ ಸಾಮೂಹಿಕ ಪ್ರಾರ್ಥನೆಗೋಸ್ಕರ ಸಯ್ಯದನಾ ಹುಝೂರ್ ಅನ್ವರ್(ಅಬಿಅ) ಅವರ ಸಮ್ಮುಖ ಅರ್ಪಿಸಬಹುದಾಗಿದೆ.

**ಜಝಾಕುಮುಲ್ಲಾಹ್ ತಆಲಾ ಖೈರಃ**
**ವಕೀಲುಲ್ ಮಾಲ್ ತಹರೀಕ್ ಜದೀದ್ ಖಾದಿಯಾನ್**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಮುಂಚೆಯಿಂದಲೂ ಕಅಬದ ಪಾವಿತ್ರ್ಯತೆ ಮತ್ತು ಅದರ ಪ್ರಾಮುಖ್ಯತೆ ಕುರಿತು ವಿಶೇಷವಾಗಿ ಚಿಂತಿಸುತ್ತಿದ್ದರು.

ಮದೀನ ಹಿಜ್‌ರತ್ ಮಾಡುವ ಸಮಯದಲ್ಲಿ ಮೆಕ್ಕಾದ ಮೇಲೆ ತಮ್ಮ ಅಂತಿಮ ದೃಷ್ಟಿಹಾಯಿಸಿ ಆಗ ಅದು ಅವರ ಕಣ್ಣುಗಳಿಂದ ದೂರವಾಗುತ್ತಿತ್ತು. ರಸೂಲುಲ್ಲಾಹ್(ಸ) ಅತ್ಯಂತ ಪ್ರೀತಿ ಹಾಗೂ ಸಮರ್ಪಣ ಭಾವದಿಂದ ನುಡಿದರು. ಓ ಮಕ್ಕಾ! ನೀನು ನನಗೆ ಭೂಮಿಯ ಮೇಲಿನ ಎಲ್ಲ ವಾಸಸ್ಥಳಗಳಿಂದಲೂ ಪ್ರಿಯವಾಗಿದೆ. ಆದರೆ ಏನು ಮಾಡಲಿ! ನಿನ್ನ ನಿವಾಸಿಗಳು ನನಗೆ ಇಲ್ಲಿ ವಾಸಿಸಲು ಬಿಡುತ್ತಿಲ್ಲ." ಮಕ್ಕ ಪಟ್ಟಣವನ್ನು ಇಷ್ಟೊಂದು ಪ್ರಿತಿಸಲು ಕಾರಣವೇನೆಂದರೆ, ಮಕ್ಕ ಅವರ ಜನ್ಮಸ್ಥಳವಾಗಿತ್ತು. ಇನ್ನೊಂದೆಡೆ ಆ ನಗರದಲ್ಲಿ ಕಅಬದ ಅಸ್ತಿತ್ವವಿತ್ತು. ಈ ಪ್ರೀತಿಯ ಕಾರಣದಿಂದ ನಮಾಝ್ ಕಡ್ಡಾಯವಾದ ನಂತರ ರಸೂಲುಲ್ಲಾಹ್(ಸ) ಅವರ ಹಾರ್ದಿಕ ಮನೋಕಾಮನೆಯು ಇಸ್ಲಾಮ್ ಧರ್ಮದಲ್ಲಿ ಅಲ್ಲಾಹನನ್ನು ಆರಾಧಿಸುವ ವೇಳೆ ಕಅಬದ ಅಭಿಮುಖವಾಗಿರಬೇಕು ಎಂಬುದಾಗಿತ್ತು. ಏಕೆಂದರೆ ಕಅಬವೇ ಆಧ್ಯಾತ್ಮಿಕ, ದೈಹಿಕ ನೆಲೆಯಲ್ಲಿ ಮುಸಲ್ಮಾನರಿಗೆ ಭವಿಷ್ಯದಲ್ಲಿ ಎಲ್ಲ ತರಹ ಆಧ್ಯತೆ ಹಾಗೂ ಪ್ರಗತಿಯ ಕೇಂದ್ರ ಆಗಬೇಕಿತ್ತು. ಆದುದರಿಂದ ಅಲ್ಲಾಹನ ಜಾಣ್ಮೆಯೂ ಅದೇ ಬಯಸಿತು. ಕಅಬದ ಮುಸಲ್ಮಾನರ ಆಧ್ಯಾತ್ಮಿಕ ಶಿಕ್ಷಣದ ತರಬೇತಿಯ ವಿಶೇಷವಾದ ವ್ಯವಸ್ಥೆಯ ಕೇಂದ್ರವಾಗಬೇಕು. ಅದು ಅಂತ್ಯ ಕಾಲದವರೆಗೂ ಜಾರಿಯಲ್ಲಿರಬೇಕು. ಅಂತೂ ಖಾನ ಕಅಬವನ್ನು ಮುಸಲ್ಮಾನರ ಆಧ್ಯಾತ್ಮಿಕ ಶಿಕ್ಷಣ ಹಾಗೂ ತರಬೇತಿಯ ಕೇಂದ್ರವನ್ನಾಗಿ ಒಪ್ಪಿತವಾಯಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಇತಿಹಾಸ ನಮಗೆ ಹೇಳಿಕೊಡುವುದೇನೆಂದರೆ ಕೇವಲ ಮಕ್ಕದಿಂದ ಅಲ್ಲ. ಬದಲಾಗಿ ಇತರ ಕ್ಷೇತ್ರಗಳಿಂದಲೂ ಕೆಲವು ಗೋತ್ರಗಳ ಪ್ರತಿನಿಧಿಗಳು ತಮ್ಮ ಕ್ಷೇತ್ರಗಳನ್ನು ಬಿಟ್ಟು, ತಮ್ಮ ಗೋತ್ರಗಳನ್ನು ಬಿಟ್ಟು ಮದೀನ ಬಂದು ಸೇರಿದರು. ಮತ್ತು ಮದೀನವನ್ನೇ ತಮ್ಮ ಜನ್ಮ ಸ್ಥಳದಂತೆ ಭಾವಿಸಿದರು. ಅವರು ವಲಸೆಯು (ಹಿಜ್‌ರತ್) ನನ್ನ ಸಮುದಾಯದ ಅಥವಾ ತನ್ನ ದೇಶಕ್ಕೆ ಬಂದದ್ದು ಮಕ್ಕದಿಂದ ಮದೀನಕ್ಕೆ ಬಂದ ರೀತಿಯ ಹಿಜ್‌ರತ್ ಆಗಿರಲಿಲ್ಲ. ಬದಲಾಗಿ ಅದೊಂದು ಜೀವ ಸಮರ್ಪಣೆಯ ಹಿಜ್‌ರತ್ ಆಗಿತ್ತು. ಅವರು ತಮ್ಮ ಕ್ಷೇತ್ರಗಳನ್ನು ಬಿಟ್ಟು, ತಮ್ಮ ಸಂಬಂಧಿಕರನ್ನು ಬಿಟ್ಟು, ತಮ್ಮ ಮನೆ ಕೆಲಸ ಕಾರ್ಯಗಳನ್ನು ಬಿಟ್ಟು, ತಮ್ಮ ಆಸ್ತಿಗಳನ್ನು ಬಿಟ್ಟು ಅಲ್ಲಾಹನಿಗೋಸ್ಕರ ಕೇಂದ್ರಕ್ಕೆ ಬಂದು ಸೇರುವುದಾಗಿದೆ, ಮತ್ತು ಕೇಂದ್ರದ ನಿರ್ದೇಶನಗಳ ಮೇರೆಗೆ ವಿವಿಧ ಕಡೆ ಕೆಲಸ ನಿರ್ವಹಿಸುವುದು ಆಗಿದೆ. (ಖುತುಬ ಜುಮಅ 26 ಮೇ 1967)

ಅಂದರೆ ಏಕದೇವತ್ವದ ಮಹೋನ್ನತವಾದ ಕೇಂದ್ರ ಕಅಬವೇ ಜೀವತರ್ಪಣೆಯ (ವಕ್ಫ್) ಬುನಾದಿಯಾಗಿದೆ. ಈ ಬುನಾದಿಯ ಮೇಲೆ ಸ್ಥಿರವಾಗಿದ್ದು ಲೋಕದಲ್ಲೆಲ್ಲ ಇಸ್ಲಾಮ್ ಧರ್ಮದ ಸೇವಾಭಾವನೆ ಹೊಂದಿ ಅಹ್ಮದಿ ವಾಖಿಫೀನ್‌ಗಳು (ಜೀವಿತರ್ಪಣಾಕಾರರು) ತನ್ನ ನಡವಳಿಕೆಯ ಮೂಲಕ ಕಅಬ ಮತ್ತು ಪರಿಶುದ್ಧವಾದ ಏಕದೇವನ ಪ್ರಚಾರ ಕೈಗೊಳ್ಳುತ್ತಿದ್ದಾರೆ. ಅಲ್ಲಾಹನು ನಮ್ಮೆಲ್ಲ ವಾಖಿಫೀನರಿಗೆ ತಮ್ಮ ಜೀವಿತವನ್ನು ಕಅಬ ನಿರ್ಮಾಣದ ನಿಜವಾದ ಉದ್ದೇಶವನ್ನು ಅರಿತು ಪೂರ್ಣಗೊಳಿಸುವ ಭಾಗ್ಯ ದಯಪಾಲಿಸಲಿ ಮತ್ತು ನಮ್ಮ ಈ ಅಲ್ಪ ಸೇವೆಗಳನ್ನು ಸ್ವೀಕರಿಸಲಿ. **ಆಮೀನ್.**

ಅನಂತರ ಅಝೀಝುಂ ಸುಲೇಮಾನ್ ಅಖ್ತರ್ 4ನೇ ದರ್ಜೆಯ ವಿದ್ಯಾರ್ಥಿ **"ವಕ್ಫ್ ಕಿ ಅಹ್ಮಿಯತ್ ಔರ್ ಉಸ್ಕಿ ಬರಕಾತ್" (ವಕ್ಫ್‌ನ ಪ್ರಾಮುಖ್ಯತೆ ಮತ್ತು ಅದರ ಅನುಗ್ರಹಗಳು)** ಎಂಬ ವಿಷಯದಲ್ಲಿ ಒಂದು ಭಾಷಣ ಮಾಡಿದರು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದನು. **"ವಇಝ್ ಖಾಲಲಹು ರಬ್ಬುಹು ಅಸ್ಲಿಮ್ ಖಾಲ ಅಸ್ಲಮ್‌ತು ಲಿರಬ್ಬಿಲ್ ಆಲಮೀನ್".**

ಹಝ್ರತ್ ಆದಮ್[ಅ] ರಿಂದ ಹಿಡಿದು ಪ್ರಸಕ್ತ ಕಾಲದವರೆಗೆ ಹಲವು ಸಂದೇಶವಾಹಕರು ಲೋಕಕ್ಕೆ ಆಗಮಿಸಿದರು ಮತ್ತು ಅವರಲ್ಲಿ ಪ್ರತಿಯೊಬ್ಬರು ಅಲ್ಲಾಹನ ಮಾರ್ಗದಲ್ಲಿ ತನ್ನ ಜೀವಿತ ಸಮರ್ಪಿಸಿದವರಾಗಿದ್ದರು. ಆದರೆ ಇಬ್ರಾಹಿಮ್[ಅ] ರವರ ತ್ಯಾಗವು ಅಲ್ಲಾಹನಿಗೋಸ್ಕರ ಜೀವಿತರ್ಪಣೆಯ ಅದ್ವಿತೀಯ ಮಾದರಿಯಾಗಿ ಪರಿಣಮಿಸಿತು. ನಾವು ಎಂಥ ಭಾಗ್ಯವಂತರಾಗಿದ್ದೇವೆ. ಹಝ್ರತ್ ಮುಹಮ್ಮದ್ ಮುಸ್ತಫ[ಸ] ಮತ್ತು ಅವರ ಅನುಯಾಯಿ (ಗುಲಾಮರಾದ) ಮಹದಿ ಕಾಲದ ಮಹಾಪುರುಷರಾಗಿ ಇಂದು ಮತ್ತೆ ಇಬ್ರಾಹಿಂ[ಅ] ರವರ ತ್ಯಾಗಗಳ ವಾರಸುದಾರರನ್ನಾಗಿ ಮಾಡಲಾಗಿದೆ. ಹಝ್ರತ್ ರಸೂಲ್ ಕರೀಮ್[ಸ] ರವರ ಅನುಗ್ರಹಪೂರ್ಣ ಕಾಲದಲ್ಲಿ ಅಲ್ಲಾಹನಿಗೋಸ್ಕರ ಸಮರ್ಪಿತರಾದವರಲ್ಲಿ, ಅಲ್ಲಾಹನಿಗೋಸ್ಕರ ಅಪಾಯಕರ ಮತ್ತು ಮುಳ್ಳಿನ ಹಾದಿಯಲ್ಲಿ ನಡೆಯುವವರ ಸರದಾರರು **ಹಝ್ರತ್ ಅಬೂಬಕರ್ ಸಿದ್ದೀಖ್[ರ] ಉಮರ್ ಫಾರೂಖ್[ರ], ಉಸ್ಮಾನ್ ಗನಿ[ರ] ಮತ್ತು ಅಲಿ[ರ]** ಅವರಾಗಿದ್ದಾರೆ. ಆದರೆ ಅವರ ಅನುಯಾಯಿಗಳಾಗಿ ಹಝ್ರತ್ ಅಬೂ ಉಬೇದಾ ಮತ್ತು ಅಬ್ದುರ್ ರಹ್ಮಾನ್ ಬಿನ್ ಔಫ್[ರ] ಮತ್ತು ತಲಹ[ರ] ರವರು ಸಹ ಆಗಿದ್ದರು. ಅವರಲ್ಲಿ ಮುಸ್ಅಬ್ ಬಿನ್ ಉಮೇರ್[ರ] ರವರೂ ಇದ್ದರು. ಅವರು ಇಸ್ಲಾಮಿನ ಪ್ರಪ್ರಥಮ ಮುಬಲ್ಲಿಗ್ ಆಗುವ ಗೌರವ ಪಡೆದರು. ಮತ್ತೆ ಮದೀನದಲ್ಲಿ ಅನ್ಸಾರರ ದೈವಭಕ್ತರು ಹಝ್ರತ್ ಸಅದ್ ಬಿನ್ ಮಆಝ್[ರ], ಸುಹೇನ್ ಬಿನ್ ಅದಿ ಮತ್ತು ಅಬೂ ತಲ್ಹಾ[ರ] ಮತ್ತು ಅವರ ಸಂಗಡಿಗರ ಒಂದು ದೊಡ್ಡ ಪಟ್ಟಿ ಇದೆ. ಅವರು ತಮ್ಮ ಅದ್ವಿತೀಯ ತ್ಯಾಗಗಳ ಮೂಲಕ ಹಾಗೂ ನಿಷ್ಠೆಯ ಅಪ್ರತಿಮ ಇತಿಹಾಸವನ್ನು ಬರೆದು ಹೋಗಿದ್ದಾರೆ.

ಪ್ರಸಕ್ತ ಕಾಲದಲ್ಲಿ ಆ ಅಲ್ಲಾಹನಿಗೋಸ್ಕರ ಸಮರ್ಪಿತವಾಗುವ ಅದ್ವಿತೀಯ ಮಾದರಿಯನ್ನು ರಸೂಲುಲ್ಲಾಹ್[ಸ] ರವರ ಆಧ್ಯಾತ್ಮಿಕ ಪುತ್ರರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ[ಅ] ಅವರು ಮತ್ತೆ ಜೀವಂತಗೊಳಿಸಿದರು. ತಮ್ಮ ಸರ್ವಸ್ವವೂ ಅಲ್ಲಾಹನ ಮತ್ತು ಅವನ ಪ್ರವಾದಿಯ ಮೇಲೆ ಸಮರ್ಪಿಸಿ ಹೇಳಿದರು. **"ವಕ್ಫ್ ರಾಹ್ ತೂ ಕುನಮ್ ಗರ್ ಜಾನ್–ಸದ್ ಹಝಾರ್". (ನಾನು ನಿನ್ನ ಮಾರ್ಗದಲ್ಲಿ ಸಾವಿರ ಜನ್ಮ ಸಿಕ್ಕಿದರೂ ತ್ಯಾಗ ಮಾಡುವೆನು)**

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಜೀವ ಸಮರ್ಪಣೆ ಮಾಡುವುದು ಇಸ್ಲಾಮಿನ ನಿಜವಾದ ಧ್ಯೇಯವಾಗಿದೆ. ಎರಡು ವಿಧಗಳನ್ನು ಅವಲಂಬಿಸಿದೆ.  ಒಂದನೆಯದಾಗಿ ಅಲ್ಲಾಹನನ್ನು ಮಾತ್ರ ತನ್ನ ಆರಾಧ್ಯ ಮತ್ತು ಉದ್ದೇಶಿತ ಹಾಗೂ ಪ್ರಿಯ ಎಂದು ಭಾವಿಸುವುದು. ಅವನ ಆರಾಧನೆಯಲ್ಲಿ ಪ್ರೀತಿ, ಭಯ ಮತ್ತು ಆಶಯಗಳಲ್ಲಿ ಯಾರೂ ಭಾಗಿಯಾಗಿರಬಾರದು. ಅವನ ಪರಿಶುದ್ಧತೆ, ಸ್ತುತಿ, ಆರಾಧನೆ ಮತ್ತು ಎಲ್ಲ ದಾಸತ್ವದ ಪರಿಪಾಲನೆ, ಎಲ್ಲ ಆದೇಶದ ಪರಿಪಾಲನೆ, ಎಲ್ಲ ದೈವಿಕ ವಿಧಿಗಳನ್ನು ಮನಃಪೂರ್ವಕವಾಗಿ ಸ್ವೀಕರಿಸಬೇಕು. ಅತ್ಯಂತ ವಿನಯಾನ್ವಿತನಾಗಿ ಎಲ್ಲಾ ಆದೇಶಗಳನ್ನು, ಕಾಯಿದೆ, ಕಾನೂನುಗಳನ್ನು ಮತ್ತು ವಿಧಿನಿಯಮಗಳನ್ನು ಚಾಚೂ ತಪ್ಪದೇ ಮನ್ನಿಸಬೇಕು  ಅಂತೆಯೇ ಎಲ್ಲ ಪರಿಶುದ್ಧ ಸಾಕ್ಷ್ಯಗಳು, ಪರಿಶುದ್ಧ ಜ್ಞಾನ, ಅವನ ಅಸೀಮ ದೈವಿಕ ಶಕ್ತಿಗಳ ಜ್ಞಾನದ ಮೂಲಕ ಅವನ ಅಧಿಪತ್ಯ, ಸರ್ವೋನ್ನತ ಸ್ಥಾನ ತಿಳಿದುಕೊಳ್ಳಲು ಒಂದು ಮಾಧ್ಯಮವನ್ನಾಗಿ ಮಾಡಿಕೊಂಡು ಅವನ ಅನುಗ್ರಹಗಳನ್ನು ಗುರುತಿಸಲು ಒಬ್ಬ ಸಾಮುದಾಯಿಕ ನಾಯಕನನ್ನು ಗುರುತಿಸಿಕೊಳ್ಳಬೇಕು.

ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸುವ ಎರಡನೇ ವಿಧ ಏನೆಂದರೆ ಅವನ ದಾಸರ ಸೇವೆ ಮತ್ತು ಸ್ನೇಹ ಹಾಗೂ ಸೌಹಾರ್ದತೆ, ಒಲವು ಮತ್ತು ಅವರ ಹಿತಕ್ಕಾಗಿ ತನ್ನನ್ನು ಸಮರ್ಪಿಸಿಕೊಳ್ಳಬೇಕು. ಇತರ ಸುಖಕ್ಕಾಗಿ ತಮ್ಮ ದುಃಖಗಳನ್ನು ಮರೆಯಬೇಕು. (ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ–5, ಪುಟ–60)

ಆಗ ಅಲ್ಲಾಹನು ಅವರಿಗೆ ಎಂತಹ ನಿಷ್ಠಾವಂತ ಅನುಯಾಯಿಗಳನ್ನು ದಯಪಾಲಿಸಿದ್ದಾನೆಂದರೆ, ಪ್ರಾಥಮಿಕ ಕಾಲದ (ಖುರೂನೆಊಲಾ) ನೆನಪುಗಳು ಜೀವಂತವಾದವು. ಹಝ್ರತ್ ಮೌಲಾನ ನೂರುದ್ದೀನ್[ರ] ಅವರ ಮುಖಂಡರಾಗಿದ್ದರು. ಸಯ್ಯದ್ನಾ ಮುಹಮ್ಮದ್, ಸಯ್ಯದನಾ ನಾಸಿರ್, ಸಯ್ಯದನಾ ತಾಹಿರ್ ಮತ್ತು ಸಯ್ಯದನಾ ಮಸ್ರೂರ್[ಅಬಿಅ] ಕಾಲ ಪುರುಷರಾದ ಮಹದಿ[ಅ] ರವರಿಗೆ ಹಝ್ರತ್ ಮೌಲಾನ ಅಬ್ದುಲ್ ಕರೀಮ್ ಸಹಿಬ್, ಮೌಲಾನ ಬುರ್ಹಾನುದ್ದೀನ್ ಸಾಹಿಬ್, ಮೌಲಾನ ಮುಹಮ್ಮದ್ ಸಾದಿಖ್ ಸಾಹಿಬ್‌ರಂತಹ ನಿಷ್ಠ ಯೋಧರನ್ನು ದಯಪಾಲಿಸಿದರು. ಅವರುಗಳು ಈ ಲೋಕವನ್ನು ತ್ಯಜಿಸಿ ಅಲ್ಲಾಹನನ್ನು ಸ್ವೀಕರಿಸಿದರು ಮತ್ತು ಮಸೀಹರ ಅನುಸರಣೆ ಮೆಚ್ಚಿಕೊಂಡರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು:

**"ಇಬ್ತಿದಾ ಸೇ ತೇರೆ ಹೀ ಸಾಯೆ ಮೇ ಮೇರೆ ದಿನ್ ಕಟೆ,**
**ಗೋದ್ ಮೇ ತೇರಿ ರಹಾ ಮೈ ಮಿಸ್ಲೆ ತಿಫ್ಲ್ ಶೀರ್‌ಖಾರ್"**

ಪ್ರಾರಂಬದಿಂದಲೂ ನಿನ್ನ ನೆರಳಿನಲ್ಲಿಯೇ ನನ್ನ ದಿನಗಳು ಕಳೆದಿವೆ.
ನಿನ್ನ ಮಡಿಲಿನಲ್ಲಿ ಹಾಲುಣುವ ಮಗುವಿನಂತೆ ನಾನಿದ್ದೆ.

ಹದೀಸಿನಲ್ಲಿ ಬರುತ್ತದೆ. ಹಝ್ರತ್ ಅನಸ್[ರ] ವರದಿ ಮಾಡುತ್ತಾರೆ. ರಸೂಲುಲ್ಲಾಹ್[ಸ] ಅವರು ಈ ಹದೀಸ್ ತನ್ನ ಪರಿಪಾಲಕನಾದ ಅಲ್ಲಾಹನ ಪರವಾಗಿ ಹೇಳಿದರು. ಅಲ್ಲಾಹನು ಹೇಳುತ್ತಾನೆ. ಒಬ್ಬ ದಾಸನು ಒಂದು ಅಡಿಯಷ್ಟು ನನ್ನೆಡೆ ಬಂದರೆ ನಾನು ಒಂದು ಕೈನಷ್ಟು ಅವನ ಸಮೀಪನಾಗುತ್ತೇನೆ. ಅವನು ಒಂದು ಕೈನಷ್ಟು ಸಮೀಪನಾದರೆ ನಾನು ಎರಡು ಕೈನಷ್ಟು ಸಮೀಪನಾಗುತ್ತೇನೆ. ಅವನು ನನ್ನ ಬಳಿ ನಡೆದುಕೊಂಡು ಬಂದರೆ ನೀನು ಅವನೆಡೆ ಓಡಿಕೊಂಡು ಹೋಗುತ್ತೇನೆ." (ಸಹೀಹ್ ಬುಖಾರಿ, ಕಿತಾಬುತ್ತೌಹೀದ್)

ಹಝ್ರತ್ ಮಸೀಹ್ ಮೌಊದ್[ಅ] ರವರಿಗೆ ಅಲ್ಲಾಹನು ಈ ವಿಷಯ ತಿಳಿಸಿದನು. ಜೈ ತೂ ಮೇರಾ ಹೋ ರಹೇ ಸಬ್ ಜಗ್ ತೇರಾ ಹೇ" (ನೀನು ನನ್ನವನಾಗಿದ್ದರೆ ಲೋಕವೇ ನಿನ್ನದಾಗಿರುತ್ತದೆ)

ಆದುದರಿಂದ ಒಬ್ಬ ವಾಖಿಫೆ ಝಿಂದಗಿ (ಅಲ್ಲಾಹನಿಗೋಸ್ಕರ ಸಮರ್ಪಿತನಾಗಿರುವವನಗೆ) ಗೋಸ್ಕರ ಇಡೀ ಲೋಕ ಅವನದ್ದಾಗಿರುತ್ತದೆ. ಅವನು ದೈವಿಕ ಅನುಗ್ರಹಗಳಿಗೆ ಔದಾರ್ಯಗಳಿಗೆ, ಕಾರುಣ್ಯಗಳಿಗೆ ಪಾತ್ರನಾಗಿರುತ್ತಾನೆ.

ವಕ್ಫ್ –ಝಿಂದಗಿಯ ಅಡಿಯಲ್ಲಿ ಸಮುದಾಯದ ಜೀವನ ಅಡಗಿರುತ್ತದೆ ಎಂಬ ಕುರಿತು ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ. ಲೋಕದಲ್ಲಿ ಹಣ ಬಲದಿಂದ ಎಂದೂ ಧರ್ಮಪ್ರಚಾರ (ತಬ್ಲೀಗ್) ಸಾಧ್ಯವಾಗಿಲ್ಲ. ಯಾವುದಾದರು ಸಮುದಾಯದವರು ಹಣಬಲದಿಂದ ಲೋಕದಲ್ಲೆಲ್ಲಾ ಧರ್ಮಪ್ರಚಾರ ಮಾಡಬಹುದಾಗಿದೆ ಎಂದು ಭಾವಿಸಿಕೊಂಡರೆ, ಅವನಿಗಿಂತ ವಂಚನೆಗೆ ಒಳಗಾದವನು. ಅವನಿಗಿಂತ ಮೂರ್ಖ, ಅದಕ್ಕಿಂತ ಹುಚ್ಚ ಸಮುದಾಯ ಲೋಕದಲ್ಲೆ ಯಾರೂ ಇರುವುದಿಲ್ಲ. ಜೀವಂತಿಕೆಯ ಸಾಕ್ಷ್ಯವೆಂದರೆ ನಿಮ್ಮಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವ ಹಿಡಿದುಕೊಂಡು ಮುಂದೆ ಬಂದು ಹೇಳಬೇಕು. ಓ ಅಮೀರುಲ್ ಮುಮಿನೀನ್!  ಈ ಜೀವನವು ಅಲ್ಲಾಹ್ ಮತ್ತು ಅವನ ಪ್ರವಾದಿ ಮತ್ತು ಅವನ ಧರ್ಮ ಇಸ್ಲಾಮಿಗೋಸ್ಕರ ಮುಡಿಪಾಗಿದೆ. ಯಾವ ದಿನ ನೀವು ನಿಮ್ಮ ಜೀವಿತ ನಿಮ್ಮದ್ದಲ್ಲ ಬದಲಾಗಿ ಇಸ್ಲಾಮಿಗೋಸ್ಕರ ಎಂದು ಭಾವಿಸಿಕೊಳ್ಳುವಿರೋ. ಯಾವ ದಿನ ಇದನ್ನು ಮನಸ್ಸಿನಲ್ಲಿ ಮಾತ್ರ ಭಾವಿಸಿಕೊಳ್ಳದೇ ತಮ್ಮ ನಡತೆಯ ಮೂಲಕ ಇದನ್ನು ಸಾಧಿಸುವಿರೋ ಆ ದಿನ ನೀವು ಹೇಳಬಹುದಾಗಿದೆ. ನೀವು ಜೀವಂತ ಜಮಾಅತ್ ಆಗಿದ್ದೀರಿ ಎಂದು.

ಹುಝೂರ್[ಅಬಿಅ] ಮುಂದುವರೆದು ಹೇಳಿದರು. ನಿಮ್ಮಿಂದ ಬಯಸುವ ಏಕೈಕ ಬೇಡಿಕೆ ಎಂದರೆ ನಿಮ್ಮ ಜೀವ, ಕೇವಲ ನೀವು ಈ ಬೇಡಿಕೆಯನ್ನು ಈಡೇರಿಸುವವರಾಗದೇ ಎಲ್ಲ ಸಮಯ ಈ ಬೇಡಿಕೆ ನಿಮ್ಮ ಮನಸ್ಸಿನಲ್ಲಿ ದೃಢವಾಗಿ ನೆಲೆ ನಿಲ್ಲಬೇಕು. ಏಕೆಂದರೆ ಅಲ್ಲಿಯವರೆಗೆ ನಿಮ್ಮಲ್ಲಿ ಶೌರ್ಯ ಮತ್ತು ಧೀರತೆ ಬರಲು ಸಾಧ್ಯವಿಲ್ಲ. ಎಲ್ಲಿಯವರೆಗೆ ನೀವು ನಿಮ್ಮ ಜೀವವನ್ನು ಲೆಕ್ಕಿಸದೇ ಧರ್ಮಕ್ಕಾಗಿ ತ್ಯಾಗ ಮಾಡಲು ಸಿದ್ಧರಾಗುವುದಿಲ್ಲವೋ ಉದ್ದೇಶ ಪ್ರಾಪ್ತಿ ಸಾಧ್ಯವಿಲ್ಲ. (ಖುತ್‌ಬ ಜುಮುಅ 11–01–1935, ಖುತ್‌ಬಾತೆ ಮಹ್‌ಮೂದ್ ಸಂಪುಟ–16)

ಪ್ರಸಕ್ತ ಕಾಲವು ಲಗಾಮು ಇಲ್ಲದೇ ಕುದುರೆಯ ಹಾಗೆ ವಿನಾಶದ ಕಡೆ ಓಡುತ್ತಿದೆ. ಆದುದರಿಂದ ನಾವು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇವೆ. ಅವನು ನಮಗೆ ಸುಲ್ತಾನುಲ್ ಖಲಮ್ (ಲೇಖನಿಯ ಸರದಾರ) ಅವರ ಶಿಕ್ಷಣದ ಪ್ರಕಾಶದಲ್ಲಿ, ಈ ಕಾಲದ ಜಿಹಾದಿನಲ್ಲಿ ನಿಮಿತ್ತ ಸೈನ್ಯದ ಮೊದಲನೇ ಪಂಕ್ತಿಯ ಯೋಧಕ್ಕಾಗಿ ಸೇವೆ ಸಲ್ಲಿಸುವ ಭಾಗ್ಯ ದಯಪಾಲಿಸಲಿ ಮತ್ತು ನಮ್ಮ ಜೀವಿತರ್ಪಣೆಯನ್ನು ಸ್ವೀಕರಿಸಲಿ. ಆಮೀನ್.

**15, ಅಕ್ಟೋಬರ್ 2019 (ಮಂಗಳವಾರ)**

ಅನಂತರ ಹುಝೂರ್ ಅನ್ವರ್[ಅಬಿಅ] ವಿದ್ಯಾರ್ಥಿಗಳ ಬಗ್ಗೆ ವಿಚಾರಿಸಿದರು. ಎಲ್ಲಾ ತರಗತಿಗಳಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿಗಳಿದ್ದಾರೆ. ಆಗ ಪ್ರಾಂಶುಪಾಲರು ಹೇಳಿದರು ಒಬ್ಬ ವಿದ್ಯಾರ್ಥಿ ಮುಮಾಹಿದನಲ್ಲಿ ದಾಖಲಾದ ನಂತರ ಮತ್ತೆ ಬರಲಿಲ್ಲ. ಅದೇ ರೀತಿ ಒಬ್ಬ ವಿದ್ಯಾರ್ಥಿ ಅನುತ್ತೀರ್ಣನಾಗಿದ್ದಾನೆ. ಹುಝೂರ್ ಅನ್ವರ್[ಅಬಿಅ] ಹೇಳಿದರು. ಇಬ್ಬರನ್ನು ಬಿಟ್ಟರೆ 114 ಸಂಖ್ಯೆಯಾಗುತ್ತದೆ. ಪ್ರಾಂಶುಪಾಲರು ಹೇಳಿದರು. ತಾವು ಹೇಳಿದ್ದು ಸರಿಯಾಗಿರುತ್ತದೆ. ಅಷ್ಟೇ ಸಂಖ್ಯೆ ಇದೆ. ಅನಂತರ ಹುಝೂರ್ ಅನ್ವರ್[ಅಬಿಅ] ಹೇಳಿದರು. 5ನೇ ತರಗತಿಯ ಮತ್ತು ಇನ್ನಿತರ ಕೆಲವು ವಿದ್ಯಾರ್ಥಿಗಳು ಲಂಡನ್ ಬರುತ್ತಿರುತ್ತಾರೆ ನನ್ನನ್ನು ಭೇಟಿಯಾಗುತ್ತಿರುತ್ತಾರೆ. ಈ ಹಿಂದಿನಿಂದ ಎಂದೂ ಲಂಡನ್‌ಗೆ ಬರದವರು ಇಂದು ಮಾತನಾಡಲಿ.

- ಇಹ್‌ಸಾನ್ ಅಹ್ಮದ್ ಎಂಬ ಒಬ್ಬ ವಿದ್ಯಾರ್ಥಿ ಹುಝೂರ್ ಅನ್ವರ್[ಅಬಿಅ] ಕೇಳಿದಕ್ಕೆ ಹೇಳಿದನು. ನಾನು ಪಾಕಿಸ್ತಾನದಲ್ಲಿ ಜನಿಸಿ 2010 ರಲ್ಲಿ ಜರ್ಮನಿಗೆ ಬಂದಿರುತ್ತೇನೆ. ಹುಝೂರ್[ಅಬಿಅ] ಕೇಳಿದರು.

ಜಾಮಿಯಕ್ಕೆ ಸ್ವಯಂ ಪ್ರೇರಿತರಾಗಿ ಬಂದಿದ್ದೀರಾ? ಅಥವಾ ತಂದೆ ತಾಯಿಯರು ಹೇಳಿದುದಕ್ಕೆ ಬಂದಿದ್ದೀರಿ? ಆಗ ಆ ವಿದ್ಯಾರ್ಥಿ ಹೇಳಿದನು. ಸ್ವಯಂ ಇಚ್ಛೆಯಿಂದ ಬಂದಿರುತ್ತೇನೆ. ಹುಝೂರ್(ಅಬಿಅ) ಕೇಳಿದ್ದಕ್ಕೆ ವಿದ್ಯಾರ್ಥಿ ಹೇಳಿದನು. ನಾನು ವಖ್ಫೆನೌ ಅಲ್ಲ. ಆಗ ಹುಝೂರ್(ಅಬಿಅ) ವಖ್ಫೆನೌ ವಿದ್ಯಾರ್ಥಿಗಳ ಅಧ್ಯಯನ ಮಾಡಿ. ಸುಮಾರು ಎಲ್ಲರೂ ವಖ್ಫೆನೌ ಆಗಿರುತ್ತಾರೆ. ಪಾಕಿಸ್ತಾನದಲ್ಲಿ ವಖ್ಫೆನೌ ಕಡಿಮೆ ಸಂಖ್ಯೆಯಲ್ಲಿ ಜಾಮಿಯಕ್ಕೆ ಸೇರುತಿದ್ದಾರೆ. ಆದರೆ ವಾಖಿಫೀನ್ ನೌ ಅಲ್ಲದವರು ಹೆಚ್ಚು ಬರುತ್ತಾರೆ.

- ಪ್ರಥಮ ವರ್ಷದ ಒಬ್ಬ ವಿದ್ಯಾರ್ಥಿ ಅವೇಸ್ ಅಹ್ಮದ್ ಹೇಳಿದರು. ನಾನು ಮೂರು ವರ್ಷದ ಹಿಂದೆ ಪಾಕಿಸ್ತಾನದಿಂದ ಬಂದಿದ್ದೆ. ನನ್ನ ಒಂದು ಪ್ರಶ್ನೆ ಇದೆ. ಅಲ್ಲಾಹನೊಡನೆ ಹೇಗೆ ಸಂಬಂಧ ಸ್ಥಾಪಿಸಬಹುದು? ಆಗ ಹುಝೂರ್(ಅಬಿಅ) ಹೇಳಿದರು. ಇಲ್ಲಿಯವರೆಗೂ ಇನ್ನೂ ಗೊತ್ತಾಗಲಿಲ್ಲವಾ. ಅವನ ಮುಂದೆ ತಲೆ ಬಾಗಿರಿ. ತಲೆಬಾಗಿರಿ, ತಲೆಬಾಗಿರಿ "ಜೋ ತುಜ್‌ಸೇ ಮಾಂಗ್ತಾ ಹೂಂ ಓ ದೌಲತ್ ತುಮ್‌ಹಿ ತೋ ಹೋ". (ನಾನು ಬಯಸುವಂತಹ ಸಂಪತ್ತು ಓ ಅಲಾಹನೇ ನೀನೇ ಆಗಿರುವೆ) ಎನ್ನುತ್ತೀರಿ. ಉದ್ದೇಶ ಈಡೇರಬಹುದು. ಅವನದ್ದೇ ಆಗಿ ಬಿಡಬೇಡಿರಿ. ಹಾಗಾದಾಗ ಅಲ್ಲಾಹನೊಡನೆ ಸಂಬಂಧ ದೃಢವಾಗುವುದು ಅಲ್ಲಾಹನ ವಾಗ್ದಾನವಿದೆ. ಯಾರು ನನ್ನ ಕಡೆ ಧಾವಿಸಿ ಬರುವರೋ ನಾನು ಅವನಿಗೆ ಮಾರ್ಗ ತೋರಿಸುತ್ತೇನೆ. ಆದುದರಿಂದ ನೀವೂ ಅಲ್ಲಹನೆಡೆ ಧಾವಿಸಲು ಪ್ರಯತ್ನಿಸಿರಿ.
- ಉಮರ್ ರಶೀದ್ ಎಂಬ ಒಬ್ಬ ವಿದ್ಯಾರ್ಥಿ ಹೇಳಿದನು. ನಾನು ಪಾಕಿಸ್ತಾನದಿಂದ 2011 ರಲ್ಲಿ ಬಂದಿದ್ದೆ. ಆಗ ಹುಝೂರ್(ಅಬಿಅ) ಹೇಳಿದರು. ಪಾಕಿಸ್ತಾನದ ಎಲ್ಲಿಂದ ಬಂದಿರುವಿರಿ. ಆಗ ಅವನು ಹೇಳಿದನು. ಮಿರ್‌ದಾನ್‌ನಿಂದ ಹುಝೂರ್(ಅಬಿಅ) ಕೇಳಿದರು. ಪಂಜಾಬಿನ ಮಿರ್‌ದಾನ್ ಅಥವಾ ಅಲ್ಲಿಯ ಸ್ಥಳಿಯರಾಗಿರುವಿರೊ ಅಲ್ಲಿ ಶೇಖರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಅವರಿಂದಲೇ ಆಗಿರುವಿರೋ. ಆಗ ವಿದ್ಯಾರ್ಥಿ ಹೇಳಿದನು. ಪಂಜಾಬಿ ಆಗಿದ್ದೇನೆ ನಾನು ಶೇಖ್ ಅಲ್ಲ. ಆದರೆ ಶೇಖ್ ಕುಟುಂಬದವರು ನಮ್ಮ ಸಂಬಂಧಿಕರಾಗಿದ್ದಾರೆ.
- ಒಬ್ಬ ವಿದ್ಯಾರ್ಥಿ ಬುರ್ಹಾನುದ್ದೀನ್ ಫೈರ್ಯಾನ್ ಕೇಳಿದನು ವಿದ್ಯಾರ್ಥಿಯೊಬ್ಬನಿಗೆ ಜಾಮಿಯಾದಲ್ಲಿ ಇಲ್ಲದ ಭಾಷೆ ಕಲಿಯುವ ಬಯಕೆ ಇದ್ದರೆ ಅವನು ಕಲಿಯಬಹುದೇ? ಅದು ಉಚಿತ ಎನ್ನಿಸುವುದೇ, ಆಗ ಹುಝೂರ್(ಅಬಿಅ) ಹೇಳಿದರು. ಮೊದಲು ಜಾಮಿಯಾ ಶಿಕ್ಷಣವನ್ನು ಪೂರ್ಣಗೊಳಿಸಿರಿ. ನಿಮ್ಮ ಬಯಕೆ ಅವರು ತಿಳಿದುಕೊಳ್ಳುವರು. ಜಾಮಿಯಾ ಮುಖಂಡರ, ಶಿಕ್ಷಕರ ವರದಿ ಬರುತ್ತದೆ. ನೀವು ಯಾವ ಭಾಷೆಯನ್ನು ಕಲಿಯ ಬಯಸುತ್ತೀರಿ ಹೇಳಬಹುದು. ಮತ್ತೆ ಜಾಮಿಯಾ ಪರಿಶೀಲಿಸಿ ಭಾಷೆಗಳನ್ನು ಕಲಿಸುತ್ತಾರೆ.

ಹುಝೂರ್(ಅಬಿಅ) ಅವರೊಂದಿಗೆ ಕೇಳಿದರು. ನೀವು Abituror ಮಾಡಿದಿರಾ, ಆಗ ಆ ವಿದ್ಯಾರ್ಥಿ ಹೇಳಿದನು. ಹೌದು ಮಾಡಿರುತ್ತೇನೆ. ಆಗ ಹುಝೂರ್(ಅಬಿಅ) ಹೇಳಿದರು. ಹಾಗಾದರೆ ಒಳ್ಳೆಯದು, ನಿಮಗೆ ವಿಶ್ವವಿದ್ಯಾಲಯದಲ್ಲಿಯೂ ಸುಲಭವಾಗಿ ಪ್ರವೇಶ ದೊರೆಯಬಹುದು. ಆದರೆ ಜಾಮಿಯಾ ಪೂರ್ಣಗೊಳಿಸಿದ ನಂತರ ಇದು ಸಾಧ್ಯವಾಗುವುದು. ಮತ್ತೆ ನಾವು ನಿರ್ಣಯ ತೆಗೆದುಕೊಳ್ಳುತ್ತೇವೆ. ನೀವು ವಕ್ಫ್ ಆಗಿದ್ದೀರಿ. ಸರ್ವಸ್ವವನ್ನು ಸಮರ್ಪಿಸಿದಿರಿ. ಆದುದರಿಂದ ಈಗ ನೀವು ಕೇವಲ ತಮ್ಮ ಬಯಕೆಯನ್ನು ಪ್ರಕಟ ಪಡಿಸಬಹುದಷ್ಟೇ. ಅದಕ್ಕೆ ಅವಕಾಶ ಕೊಡುವುದು ತಿರಸ್ಕರಿಸುವುದು ವ್ಯವಸ್ಥಾಪಕರ ಕೆಲಸವಾಗಿದೆ. ಸಾಮಾನ್ಯವಾಗಿ ಭಾಷೆ ಕಲಿಯ ಬಯಸುವವರಿಗೆ ಅನುಮತಿ ದೊರೆಯುತ್ತದೆ.

- ಓರ್ವ ವಿದ್ಯಾರ್ಥಿ ಚೌಧರಿ ಅಯಾಝ್ ಅಹ್ಮದ್ ಕೇಳಿದರು. ಓರ್ವ ಮುರಬ್ಬಿ ನಾಲಿಗೆ ದೋಷದಿಂದಾಗಿ ತೊದಲು ನುಡಿಯುವವನಾದರೆ ಹೇಗೆ ಸರಿಪಡಿಸಿ ಕೊಳ್ಳಬಹುದು? ಆಗ ಹುಝೂರ್(ಅಬಿಅ) ಹೇಳಿದರು. ಮೊದಲು ಸಮಾಧಾನದಿಂದ ಮಾತನಾಡುವ ಅಭ್ಯಾಸ ಮಾಡಿಕೊಳ್ಳಬೇಕು. ಸಮಾಧಾನದಿಂದ ಹೇಳಿದರೆ ಸರಿಯಾಗಬಹುದು. ನನ್ನ ಅನುಭವದಲ್ಲಿ ಬಂದ ವಿಷಯವೆಂದರೆ. ಕೆಲವು ಮುರಬ್ಬಿಯರಲ್ಲಿ ಅಲ್ಪ ಪ್ರಮಾಣದ ತೊದಲಿಕೆಯಿದ್ದರೂ ಅದು ಅವರು ಭಾಷಣಕ್ಕೆ ನಿಂತಾಗ ದೂರವಾಗಿ ಬಿಡುತ್ತದೆ. ಅಲ್ಲಾಹನು ಅನುಗ್ರಹಿಸುತ್ತಾನೆ. ಉಳಿದ ವಿಷಯವೆಂದರೆ ಹೆಚ್ಚಿನ ಪ್ರಮಾಣದಲ್ಲಿದ್ದರೆ ಅವರಿಂದ ಬೇರೆ ಕಾರ್ಯಗಳನ್ನು ತೆಗೆದುಕೊಳ್ಳಬಹುದು. ಭಾಷಣವೆ ಮಾಡಬೇಕೆಂಬುದು ಕಡ್ಡಾಯವೇನಲ್ಲ. ಹುಝೂರ್(ಅಬಿಅ) ಹೇಳಿದರು. ಕೆಲವೊಮ್ಮೆ ತೊದಲಿಕೆ ಇದ್ದವರು ವೇಗವಾಗಿ ಹೇಳಲು ಪ್ರಯತ್ನ ಮಾಡಿದರೆ ಅಥವಾ ಗಾಬರಿಯಿಂದ ಮಾತನಾಡಿದರೆ ಇನ್ನೂ ಹೆಚ್ಚಾಗುತ್ತದೆ. ಸ್ವಲ್ಪ ಸಮಾಧಾನ ವಹಿಸಿದರೆ ಉದ್ದೇಶ ಸಾಧಿಸಬಹುದು.
- ವಿದ್ಯಾರ್ಥಿ ಹಾಫಿಝ್ ಇಹ್‌ತೆಶಾಮ್ ಅಹ್ಮದ್ ಹುಝೂರ್(ಅಬಿಅ) ಕೇಳಿದಕ್ಕೆ ಹೇಳಿದನು. ನಾನು 2014 ರಲ್ಲಿ ಜರ್ಮನಿಗೆ ಬಂದಿದ್ದೆ. ರಬ್ಬಾದಿಂದ ಪವಿತ್ರ ಖುರ್‌ಆನ್ ಹಿಫ್ಝ್ (ಕಂಠಪಾಠ) ಮಾಡಿದ್ದೆ. ಅವನು ಕೇಳಿದನು. ನಾವು ಖಲೀಫತುಲ್ ಮಸೀಹ್ ಅವರಿಗಾಗಿ ಯಾವ ದುಆ ಮಾಡಬೇಕು? ಆಗ ಹುಝೂರ್(ಅಬಿಅ) ಹೇಳಿದರು. ನಿಮ್ಮ ದೃಷ್ಟಿಯಲ್ಲಿ ಮಾಡಬೇಕಾದ ದುಆ ಯಾವುದಿದೆ. ಖಲೀಫತುಲ್ ಮಸೀಹ್ ಅವರ ಕಾರ್ಯಗಳನ್ನು ಮುಂದಿರಿಸಿಕೊಂಡು ಅವರ ಉದ್ದೇಶಗಳ ಪೂರ್ತಿಯಾಗಿ ದುಆ ಮಾಡಬೇಕು. ನಿಮಗಾಗಿ ಮಾಡುವಂತಹ ಪ್ರಾರ್ಥನೆಗಳು ಸ್ವೀಕಾರಗೊಳ್ಳುವಂತೆಯೂ ದುಆ ಮಾಡಬೇಕು.
- ವಿದ್ಯಾರ್ಥಿ ಚೌಧರಿ ಶಹರ್‌ಯಾರ್ ನವಾಝ್ ತಮ್ಮ ವಿಸಾ ಸಿಗುತ್ತಿಲ್ಲ ವೀಝಾ ಸಿಗುವುದಕ್ಕಾಗಿ ದುಆ ಮಾಡಲು ಬೇಡಿಕೊಂಡರು. ಆಗ ಹುಝೂರ್(ಅಬಿಅ) ಹೇಳಿದರು ಅಲ್ಲಾಹನು ಅನುಗ್ರಹಿಸುವಂತಾಗಲಿ.
- ವಿದ್ಯಾರ್ಥಿ ಹಾಫಿಝ್ ಲುಖ್ಮಾನ್ ಅಹ್ಮದ್ ತನಗಾಗಿ ಪ್ರಾರ್ಥಿಸಲು ಮನವಿ ಮಾಡಿಕೊಂಡರು. ಒಂದೆರಡು ವರ್ಷಗಳಿಂದ ನನ್ನ ಕಾಲುಗಳಲ್ಲಿ ಸಮಸ್ಯೆಯಿತ್ತು. ಈಗ ಸ್ವಲ್ಪ ಗುಣವಿದೆ. ಆಗ ಹುಝೂರ್(ಅಬಿಅ) ಹೇಳಿದರು. ಅಲ್ಲಾಹನು ತನ್ನ ಅನುಗ್ರಹ ದಯಪಾಲಿಸಲಿ.
- ವಿದ್ಯಾರ್ಥಿ ಫೆರೊಝ್ಝ್, ಅದೀಬ್ ಹೇಳಿದನು. ನಾನು ಗಡಿಶಾಹೂ, ಲಾಹೋರ್‌ನಿಂದ ಇದೆ 2015 ರಲ್ಲಿ ಜರ್ಮನಿಗೆ ಬಂದಿರುತ್ತೇನೆ. ಈಗ ಇಲ್ಲಿ ಸಮಾಧಾನವಿದೆ ಎಂದು ಹೇಳಿದನು. ಹುಝೂರ್(ಅಬಿಅ) ಕೇಳಿದಕ್ಕೆ ವಿದ್ಯಾರ್ಥಿಯು ಹೇಳಿದನು. ಜರ್ಮನ್ ಭಾಷೆ ಕಲಿಯಲು ಪ್ರಯತ್ನ ಮಾಡುತ್ತಿದ್ದೇನೆ. ತನ್ನ ಶಾಹಿದ್ ದರ್ಜೆಯ ಉತ್ತೀರ್ಣತೆಗೋಸ್ಕರ ಪ್ರಾರ್ಥಿಸಲು ಬೇಡಿಕೊಂಡರು.
- ಓರ್ವ ವಿದ್ಯಾರ್ಥಿ ಹೇಳಿದನು. ನನ್ನ ಹೆಸರು ಸಮೀರ್ ಖಾನ್, 2013 ರಲ್ಲಿ ನಾನು ನಾರ್‌ವಾಲ್ ಡೇಕಾವಾಲ್ ನಿಂದ ಬಂದಿದ್ದೇನೆ. ಹುಝೂರ್(ಅಬಿಅ) ಹೇಳಿದರು. ಖಾನ್ ನವರಾದರೆ ಅವರುಗಳು ವ್ಯಾಪಾರಸ್ಥರಾಗಿದ್ದಾರೆ. ನಮ್ಮ ಎಲ್ಲಾ ಸಂಬಂಧಿಕರು ವ್ಯಾಪಾರಸ್ಥರಾಗಿದ್ದಾರೆ. ನೀವು ಹೇಗೆ ಮುರಬ್ಬಿಯಾದಿರಿ. ಆಗ ಅವರು ಹೇಳಿದರು. ನಾನು ಮುರಬ್ಬಿಯಾಗಬೇಕು ಎಂದು ಬಯಸಿದ್ದೆ.
- ವಿದ್ಯಾರ್ಥಿ ಅಬ್ದುರ್ ರಾಫೀರ್ ಹೇಳಿದನು. ನಾನು ಪಾಕಿಸ್ತಾನದಿಂದ 2014 ರಲ್ಲಿ ಜರ್ಮನಿಗೆ ಬಂದಿದ್ದೆ. ವಿದ್ಯಾರ್ಥಿಯು ಕೇಳಿದನು. ನಮಾಝ್ ಖಝಾಅ ಆದರೆ ನಂತರ ಎರಡು ರಕಅತುಗಳು ಸ್ಥಳಿಯ ಜನರಿಗೆ ಪೂರ್ಣಗೊಳಿಸಿಕೊಳ್ಳಬೇಕಾಗುತ್ತದೆ. ಆ ಎರಡು ರಕಅತುಗಳಲ್ಲಿ ಸೂರಃ ಫಾತಿಹ ನಂತರ ಯಾರು ಸೂರಃ ಪಠಿಸಬೇಕಾಗುವುದು? ಆಗ ಹುಝೂರ್(ಅಬಿಅ) ಹೇಳಿದರು. ಖಝಾ ನಮಾಝ್‌ಗೂ ನಂತರದ ಎರಡು ರಕಅತುಗಳಿಗೆ ಏನು ಸಂಬಂಧವಿದೆ? ವಿದ್ಯಾರ್ಥಿಯು ಹೇಳಿದನು. ಪ್ರವಾಸದಲ್ಲಿದ್ದರೆ, ಆಗ ಹುಝೂರ್(ಅಬಿಅ) ಹೇಳಿದರು. ಅದಕ್ಕೆ ಖಝಾ ನಮಾಝ್ ಹೇಳುವುದಿಲ್ಲ. ಅದನ್ನು ಖಸರ್ ಎನ್ನುತ್ತಾರೆ. ಇಮಾಮ್ ನಮಾಝ್ ಮಾಡುತ್ತಿದ್ದರೆ, ನಾನು ಝುಹರ್ ಅಸರ್ ನಮಾಝ್ ನಿರ್ವಹಿಸಿ ಕೊಡುತ್ತಿದ್ದೇನೆ. ಪ್ರವಾಸದಲ್ಲಿದ್ದ ಕಾರಣ ಖಸರ್ ಮಾಡುತ್ತಿದ್ದೇನೆ. ಆಗ ಸ್ಥಳೀಯ ಜನರು ನಂತರ ಎರಡು ರಕಅತುಗಳು ಪೂರ್ಣಗೊಳಿಸಬೇಕಾಗುತ್ತದೆ. ಈ ಕೊನೆಯ ಎರಡು ರಕಅತುಗಳಲ್ಲಿ ನೀವು ಸೂರಃ ಫಾತಿಹ ಅಲ್ಲದೆ ಬೇರೆ ಸುರಗಳು ಓದುವಿರೋ? ಆಗ ವಿದ್ಯಾರ್ಥಿ ಹೇಳಿದನು. ಇಲ್ಲ, ಆಗ ಹುಝೂರ್(ಅಬಿಅ) ಹೇಳಿದರು. ಖಸರ್ ನಮಾಝಿನಲ್ಲಿ ಪ್ರಶ್ನೆಯೇ ಏಳುವುದಿಲ್ಲ. ನಿಮ್ಮ ಪ್ರಶ್ನೆ ಹೀಗಿರಬೇಕಿತ್ತು. ಇಮಾಮ್ ನಮಾಝ್ ಮಾಡಿಸುತ್ತಿದ್ದಾರೆ ಮತ್ತು ಪ್ರಥಮ ಎರಡು ರಕಅತುಗಳು ಓದಿಸಿಯಾಗಿದೆ. ಈಗ ಇಮಾಮ್ ಸಲಾಂ ಹೇಳಿ ನಮಾಝ್ ಮುಗಿಸಿದಾಗ ನಮಗೆ ಉಳಿದ ರಕಅತುಗಳಲ್ಲಿ ಸೂರಃ ಫಾತಿಹ ನಂತರ ಬೇರೆ ಸೂರಃ ಓದಬೇಕಾಗಿದೆಯೇ ಇಲ್ಲವೋ ಎಂದು.

ಅದಾಗ್ಯೂ ಪ್ರಾಥಮಿಕ ಹಂತದ ರಕಅತುಗಳು ಅಥವಾ ಒಂದು ರಕಅತು ಉಳಿದಿದೆಯಾದರೆ ಅದನ್ನು ನಂತರ ಪೂರ್ಣಗೊಳಿಸಿಕೊಳ್ಳಬೇಕಾದರೆ ಅದರಲ್ಲಿ ಸೂರಃ ಫಾತಿಹ ನಂತರ ಬೇರೆ ಸೂರಃ ಓದಬೇಕಾಗುತ್ತದೆ. ನೀವು ಆ ರಕಅತುಗಳಲ್ಲಿ ಯಾವುದೇ ಸೂರಃ ಓದಬಹುದು. ಕೊನೆಯ ರಕಅತುಗಳಲ್ಲಿ ಓದುವ ಅವಶ್ಯಕತೆ ಇರುವುದಿಲ್ಲ. ಹುಝೂರ್(ಅಬಿಅ) ಹೇಳಿದರು. ಖಝಾ ಮತ್ತು ಖಸರ್‌ನಲ್ಲಿ ಏನು ವ್ಯತ್ಯಾಸವಿದೆ ಹೇಳಿ. ಆಗ ಆ ವಿದ್ಯಾರ್ಥಿಯು ಹೇಳಿದನು. ಖಸರ್ ನಮಾಝ್ ಪ್ರವಾಸದಲ್ಲಿ ಮಾಡಲಾಗುತ್ತದೆ. ಯಾವುದೇ

ನಮಾಝ್ ಲೋಪವಾಗಿದ್ದಲ್ಲಿ ನಂತರ ಮಾಡುವುದಕ್ಕೆ ಖಝಾ ಎನ್ನುತ್ತಾರೆ. ಹುಝೂರ್ ಹೇಳಿದರು. ಖಝಾಯೆ ಉಮರಿ ಎಂದರೇನು? ಆಗ ವಿದ್ಯಾರ್ಥಿ ಹೇಳಿದರು. ಖಝಾಯೆ ಉಮರಿ ಅಹ್ಮದಿಯೇತರು ಮಾಡುತ್ತಾರೆ. ಹುಝೂರ್(ಅಬಿಅ) ಹೇಳಿದರು ವರ್ಷವೆಲ್ಲ ಮುಗಿದ ನಂತರ ಒಂದು ನಮಾಝ್ ಮಾಡಿಕೊಂಡರೆ ಮುಗಿಯಿತು. ನಾವು ಅಹ್ಮದಿಯರು ಹೀಗೆ ಮಾಡುವುದಿಲ್ಲ. ಪ್ರವಾಸದ ಯಾವ ಸಮಸ್ಯೆಯಿಲ್ಲ. ಮಗ್ರಿಬ್‌ನಲ್ಲಿ ಮೂರು ರಕಅತುಗಳು ಓದಬೇಕಾಗುತ್ತದೆ. ಝುಹರ್, ಅಸರ್ ಮತ್ತು ಇಶಾಅನಲ್ಲಿ ನಾಲ್ಕು, ನಾಲ್ಕು ರಕಅತುಗಳು ಇರುತ್ತವೆ. ಆ ನಮಾಝುಗಳಲ್ಲಿ ಕೊನೆಯ ಎರಡು ರಕಅತುಗಳಲ್ಲಿ ಯಾವುದೇ ಬೇರೆ ಸೂರಃ ಓದುವಿರೋ? ಆಗ ವಿದ್ಯಾರ್ಥಿ ಹೇಳಿದನು ಇಲ್ಲ ಓದುವುದಿಲ್ಲ. ಆಗ ಹುಝೂರ್(ಅಬಿಅ) ಹೇಳಿದರು. ಪ್ರವಾಸದಲ್ಲಿಯೂ ನೀವು ಸ್ಥಳೀಯರಾದ ಕಾರಣ ಈ ಎರಡು ರಕಅತುಗಳು ಪೂರ್ಣಗೊಳಿಸಿಕೊಳ್ಳಬೇಕಾದರೆ ಸೂರಃ ಫಾತಿಹ ನಂತರ ಯಾವುದೇ ಬೇರೆ ಸೂರಃ ಓದಬೇಕಾಗಿಲ್ಲ.

## ಸದಖತುಲ್ ಫಿತರ್ ಪಾಲನೆ:

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ "ಫಿತ್ರಾನ" ಕೊಡಲು ಒಂದು ಸಾಅ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ "ಸದಖತುಲ್ ಫಿತರ್" ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋಧಿ, ಅಕ್ಕಿ) ಯ ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳಿಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 55/– ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳಿಯ ಜಮಾಅತ್ತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತ್ತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತ್ತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ.

## ಈದ್ ಫಂಡ್

ಈ ಚಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲದಿಂದ ಖಾಯಮ್ ಆಗಿರುತ್ತದೆ. ಈ ಫಂಡಿನ ಉದ್ದೇಶವೇನಾಗಿತ್ತೆಂದರೆ ಸಂತೋಷದ ಸಮಯಗಳಲ್ಲಿ ಮನುಷ್ಯ ತನ್ನ ಸ್ವಯಂ ಸಂತೃಪ್ತಿಗಾಗಿ, ಬಟ್ಟೆಗಳಿಗಾಗಿ, ಊಟೋಪಚಾರ, ಅತಿಥಿ ಸತ್ಕಾರ ಇತ್ಯಾದಿ ಹಲವು ವಿಧಗಳ ವೆಚ್ಚ ಮಾಡುತ್ತಾನೆ. ಇತರರಿಗೂ ಉಡುಗೋರೆ ಇತ್ಯಾದಿಗಳನ್ನು ನೀಡುತ್ತಾನೆ ಅದೇ ರೀತಿ ಈ ಸುಸಂದರ್ಭದಲ್ಲಿ ಧರ್ಮ ಕಾರ್ಯಗಳ ಬಗ್ಗೆಯು ಗಮನವಿರಬೇಕು. ಅಹ್ಮದಿ ಸದಸ್ಯರು ಬೈಅತ್ ಮಾಡುವಾಗಲೇ ಈ ಕರಾರು ಒಪ್ಪಿರುತ್ತಾರೆ. ಧರ್ಮವನ್ನು ಲೋಕದ ಕಾರ್ಯಗಳ ಮೇಲೆ ಆಧ್ಯತೆ ನೀಡುವೆನು ಎಂದು. ಆದುದರಿಂದ ಪ್ರತಿ ಅಹ್ಮದಿಯರಿಂದ ನಿರೀಕ್ಷಿಸಲಾಗಿರುವುದು ಏನೆಂದರೆ ಅವರು ಸಂತೋಷ ಸಂಭ್ರಮದ ಹಬ್ಬಗಳಲ್ಲಿ ಧರ್ಮಕಾರ್ಯಗಳ ಬಗ್ಗೆಯು ಲಕ್ಷ್ಯವಹಿಸುವರು. ಈ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಕಾಲದಲ್ಲಿ ಈ ಖಾತೆಗೆ ಪ್ರತಿಯೊಬ್ಬ ಆದಾಯವುಳ್ಳ ಅಹ್ಮದಿ ಒಬ್ಬರಿಗೆ ಒಂದು ರೂಪಾಯಿಯಂತೆ "ಈದ್ ಫಂಡ್" ಕೊಡಬೇಕು. ಇಂದು ಒಂದು ರೂಪಾಯಿಯ ಬೆಲೆ ಏನು ಉಳಿಯಲಿಲ್ಲ, ಆದುದರಿಂದ ಒಂದು ರೂಪಾಯಿಗೆ ಸೀಮಿತ ಪಡಿಸದೆ ನಿಮ್ಮ ಸಾಮರ್ಥ್ಯನುಸಾರವಾಗಿ ಕೊಡಬಹುದಾಗಿದೆ. ಒಂದು ಸಲಹೆ ಏನೆಂದರೆ ಹಬ್ಬದ ದಿವಸ ಸಾಮಾನ್ಯವಾಗಿ ಮಾಡಬಹುದಾದ ಖರ್ಚುವೆಚ್ಚದ ಅರ್ಧ ಭಾಗವನ್ನು ಈ ಖಾತೆಯಲ್ಲಿ ನೀಡಬಹುದಾಗಿದೆ. ಇದು ಕೇಂದ್ರೀಯ ಚಂದವಾಗಿರುತ್ತದೆ. ವಸೂಲಾದ ಸಂಪೂರ್ಣ ಮೊತ್ತವನ್ನು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಯಲ್ಲಿ ಜಮಾ ಮಾಡುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಸ್ಥಳಿಯರಿಗೆ ಯಾವುದೇ ರೀತಿಯ ಖರ್ಚು ಮಾಡಲು ಅನುಮತಿ ಇರುವುದಿಲ್ಲ.

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

- ವಿದ್ಯಾರ್ಥಿ ಸಯ್ಯದ್ ಬುಖಾರಿ ರಮೀಜ್ ತಾಹಿರ್ ಹೇಳಿದನು. ದುಆ ಮಾಡಲು ಬೇಡಿಕೊಳ್ಳುತ್ತೇನೆ. ಹುಝೂರ್(ಅಬಿಅ) ಕೇಳಿದರು. ತಾವು ಯಾರ ಮಗನಾಗಿದ್ದೀರಿ. ಅವರು ಹೇಳಿದರು. ಸಯ್ಯದ್ ಹಸನ್ ತಾಹಿರ್ ಬುಖಾರಿ ಅವರ ಮಗನಾಗಿದ್ದೇನೆ. ಅವರು Doetzambach ನಲ್ಲಿ ಮುರುಬ್ಬಿಯಾಗಿದ್ದಾರೆ.
- ಹುಝೂರ್(ಅಬಿಅ) ಕೇಳಿದರು. ನಿಮಗೆ ರಷ್ಯನ್ ಭಾಷೆ ಬರುತ್ತದೆಯೇ, ವಿದ್ಯಾರ್ಥಿ ಉತ್ತರಿಸಿದನು. ರಷ್ಯನ್ ಭಾಷೆ ಬರುತ್ತದೆ. ಅವರ ತಂದೆಯ ಕುರಿತು ವಿಚಾರಿಸಿದರು. ಅವರ Heart operation ಆಗಿತ್ತು. ನಂತರ ಆ ವಿದ್ಯಾರ್ಥಿ ಕೇಳಿದನು. ಇತ್ತೀಚೆಗೆ ಒರ್ವ ಹುಡುಗಿ ಲೋಕದಲ್ಲಿ ತುಂಬ ಪ್ರಸಿದ್ಧಿ ಪಡೆಯುತ್ತಿದ್ದಾಳೆ. ಅವಳ ಹೆಸರು Grety Thumberg, ಪತ್ರಿಕೆಗಳಲ್ಲಿ ಅವಳ ಬಗ್ಗೆ ತುಂಬ ಚರ್ಚೆ ನಡೆಯುತ್ತಿದೆ. ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಅವರು ಲೋಕದ "Global Warming" ಕುರಿತು ಭಾಷಣ ಮಾಡಿದ್ದಾರೆ. Climate change ಬಗ್ಗೆ ಅವಳು campain ನಡೆಸುತ್ತಿದ್ದಾಳೆ. ಈ ಕುರಿತು ತಮ್ಮ ಅಭಿಪ್ರಾಯವೇನು? ಹುಝೂರ್(ಅಬಿಅ) ಹೇಳಿದರು. ಅವಳ ಮನಸ್ಸಿನಲ್ಲಿ ಒಂದು ಒಳ್ಳೆಯ ವಿಚಾರ ಬಂದಿದೆ. ಅಲ್ಲಾಹನು ಅವಳಿಗೆ ಸಾಮರ್ಥ್ಯ ನೀಡಿದ್ದಾನೆ. ಅವಳು ಒಳ್ಳೆಯ ಭಾಷಣ ಮಾಡುತ್ತಾಳೆ. ಅವಳು ಹಿರಿಯರಿಗೂ ಸಹ ಹೇಳುತ್ತಿದ್ದಾಳೆ. ನೀವು ನಮ್ಮ ಭವಿಷ್ಯವನ್ನು ನಾಶ ಮಾಡುತ್ತಿದ್ದೀರಿ. ಅವಳು ಹೇಳುವ ಶೈಲಿ ತುಂಬ ಚೆನ್ನಾಗಿದೆ. ಅವಳು ಮಡುತ್ತಿರುವುದು ಸರಿಯಾಗಿದೆ. ಉಳಿದ ವಿಷಯವೇನೆಂದರೆ "Global warming" ಅಂತೂ ಆಗುತ್ತಿದೆ. ಆದರೆ ಆ ಯುದ್ಧಗಳು ನಡೆಯದಂತೆ ಪ್ರಾರ್ತಿಸಿರಿ. Global warming" ನ ಪ್ರಭಾವದಿಂದಾಗಿ ನೂರು ವರ್ಷ ನಂತರ ಲೋಕ ಅಂತ್ಯವಾಗುವುದು. ಈ ಮಹಾಯುದ್ಧ ಆದರೆ ಅದಕ್ಕಿಂತ ಮುಂಚೆಯೇ ಈ ಲೋಕ ಅಂತ್ಯವಾಗಬಹುದು. ಆದುದರಿಂದ ಅದಕ್ಕಾಗಿ ಪ್ರಾರ್ಥಿಸಬೇಕಾಗಿದೆ. ಆ ಹುಡುಗಿ ಚೆನ್ನಾಗಿ ಹೇಳುವುದಾದರೆ ನಿಮಗೆ ಅದರಿಂದ ಪಾಠ ಕಲಿಯಬೇಕಾಗಿದೆ. ಆಕೆ ತುಂಬ ಆತ್ಮವಿಶ್ವಾಸದಿಂದ ಜನರ ಮುಂದೆ ಕುಳಿತು ಮಾತನಾಡುತ್ತಿದ್ದಾಳೆ. **(ಮುಂದುವರಿಯುವುದು)**

## ಝಕಾತ್ ನೀಡುವಿಕೆಯು ಒಂದು ಕಡ್ಡಾಯ ಕರ್ಮವಾಗಿದೆ

ಝಕಾತ್ ಇಸ್ಲಾಮಿನ ಐದು ಆಧಾರ ಸ್ತಂಬಗಳಲ್ಲಿ ಒಂದು ಮುಖ್ಯ ಸ್ತಂಬವಾಗಿದೆ ಮತ್ತು ನಿಗದಿತ ಪ್ರಮಾಣದಲ್ಲಿ ಅಹ್‌ಮದಿ ಮುಸಲ್ಮಾನರಿಗೆ ಇದೊಂದು ಕಡ್ಡಾಯ ಶರಯೀ ಕರ್ತವ್ಯವಾಗಿದೆ.

ಸಯ್ಯದುನಾ ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಝಕಾತಿನ ಪ್ರಾಮುಖ್ಯತೆಯ ಬಗ್ಗೆ ಹೀಗೆ ಹೇಳಿದ್ದಾರೆ:

"ನಾನು ಮತ್ತೊಮ್ಮೆ ನಿಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಯಾವ ರೀತಿ ನಮ್ಮ ನಬಿ ಕರೀಮ್(ಸ) ಅವರು ಝಕಾತ್ ಒಟ್ಟುಗೂಡಿಸಿ ವಿತರಿಸುವ ನಮೂನೆಯನ್ನು ಸ್ಥಾಪಿಸಿದ್ದರೋ, ಯಾವ ರೀತಿ ಅಲ್ಲಾಹನ ಪವಿತ್ರ ಗ್ರಂಥ ಅದರ ಕ್ರಮಗಳನ್ನು ವಿವರಿಸಿತ್ತೋ, ಅದೇ ರೀತಿ ನಮ್ಮ ಜಮಾಅತ್ ಇದನ್ನು ಒಟ್ಟುಗೂಡಿಸಿ ಬಳಕೆ ಮಾಡುವುದಿಲ್ಲವೊ, ಇಸ್ಲಾಮಿನ ನಾಲ್ಕು ತತ್ವಗಳಲ್ಲಿ ಒಂದು ಅಮೋಘವಾದ ವಾಸ್ತವ ತತ್ವದ ಮೇಲೆ ನಡೆದುಕೊಂಡಂತಾಗುವುದಿಲ್ಲ. ಯಾವ ರೀತಿ ನಮಾಝ್ ಕಡ್ಡಾಯವಾಗಿದೆಯೋ ಮತ್ತು ಮಸೀದಿಯಲ್ಲಿ ಜಮಾತ್ ಸಹಿತ ನಿರ್ವಹಿಸುವುದು ಕಡ್ಡಾಯವಾಗಿದೆಯೋ ಹಾಗೆ ಝಕಾತನ್ನು ಒಟ್ಟುಗೂಡಿಸಿ ವಿತರಣೆ ಮಾಡುವುದು ಮತ್ತು ಅದರ ಬಳಕೆ ಕಡ್ಡಾಯಗೊಳಿಸಲಾಗಿದೆ. ಯಾವ ರೀತಿ ನಮಾಝ್, ಉಪವಾಸ (ರೋಝ) ಮತ್ತು ಹಜ್ಜ್ ಯಾತ್ರೆ ಪಾಲಿಸುವುದು ಅವಶ್ಯಕವೆಂದು ಭಾವಿಸುತ್ತೀರಿರೋ ಅದೇರೀತಿ ಈ ಕರ್ತವ್ಯ ಪಾಲನೆಯು ಅವಶ್ಯವೆಂದು ಪರಿಗಣಿಸಬೇಕು." **(ಮಾಲಿ ನಿಝಾಮ್, ಭಾಗ–2, ಪುಟ–30)**

ಸಯ್ಯದುನಾ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅ.ಬಿ.ಅ) ಅವರು ನುಡಿಯುತ್ತಾರೆ:

"ಝಕಾತ್ ಪ್ರಮುಖ ಮತ್ತು ಕಡ್ಡಾಯ ಕರ್ಮ ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ. ಆದ್ದರಿಂದ ಯಾರ ಮೇಲೆ ಝಕಾತ್ ಕಡ್ಡಾಯವಾಗಿರುತ್ತದೆಯೋ ಅವರಿಗೆ ಝಕಾತ್ ನೀಡುವುದು ಅನಿವಾರ್ಯವಾಗಿದೆ ಎಂಬ ವಿಷಯವನ್ನು ಗಮನಕ್ಕೆ ತರುತ್ತಿದ್ದೇನೆ. ಅವರು ಅವಶ್ಯವಾಗಿ ಝಕಾತ್ ನೀಡಬೇಕು, ವಿಶೇಶವಾಗಿ ಮಹಿಳೆಯರು ಆಭರಣಗಳನ್ನು ಹೊಂದಿರುತ್ತಾರೆ. ಆ ಆಭರಣಗಳ ಝಕಾತ್ ಕೊಡುವುದು ಕಡ್ಡಾಯವಾಗಿದೆ." **(ಖುತ್‌ಬ ಜುಮುಅ 13–04–2007)**

ಭಾರತದ ಎಲ್ಲಾ ಅರ್ಹರಾದ ಪುರುಷರು ಮತ್ತು ಮಹಿಳೆಯರು ನಿಗದಿತ ಪ್ರಮಾಣದಲ್ಲಿ ಈ ಪ್ರಮುಖ ಕಡ್ಡಾಯ ಝಕಾತನ್ನು ನೀಡುವ ಕಡೆ ಗಮನ ವಹಿಸಬೇಕಾಗಿದೆ. ಅಲ್ಲಾಹನು ನಮಗೆಲ್ಲರಿಗೂ ಈ ಭಾಗ್ಯ ನೀಡುವಂತಾಗಲಿ. ಆಮೀನ್

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 21 May 2020 Issue No. 19

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 18ರ ವರದಿಯ ಉಳಿದ ಭಾಗ)**

ಹುಝೂರ್(ಅಬಿಅ) ಮಾತುಕತೆಯ ನಡುವೆ ಪ್ರಾಂಶುಪಾಲರಿಗೆ ನಿರ್ದೇಶನ ನೀಡಿದರು. ವಿದ್ಯಾರ್ಥಿಗಳಿಗೆ Brown bread ನೀಡಿರಿ. White bread ಬಂದ್ ಮಾಡಿ ಅದು ಹಾನಿಕಾರಕವಾಗಿವೆ. ಅದೇ ರೀತಿ ಊಟದಲ್ಲಿ ಬಳಸುವ ಪದಾರ್ಥಗಳ ಬಗ್ಗೆ ಕೇಳಿದರು. ಬಝಾರಿನಲ್ಲಿ ಸಿಗುವ ಮಸಾಲಾ ಪಾಕೇಟುಗಳು ಯಾವ ಬ್ರಾಂಡ್‌ನದೇ ಆಗಿರಲಿ ಸರಿ ಇರುವುದಿಲ್ಲ. ಅವು ಆರೋಗ್ಯಕ್ಕೆ ಹಾನಿಕಾರಕವಾಗಿರುತ್ತದೆ. ತಮ್ಮ ಪದಾರ್ಥಗಳನ್ನು ತಾವೆ ಸ್ವಯಂ ಪುಡಿ ಮಾಡಿ ತಯಾರಿಸಬೇಕು.

ಉಪಹಾರದ ನಂತರ ಹುಝೂರ್(ಅಬಿಅ) ವಿದ್ಯಾರ್ಥಿಗಳಿಗೆ ಜಾಮಿಯಾ ಸಭಾಂಗಣಕ್ಕೆ ಹೋಗಲು ಅನುಮತಿ ನೀಡಿದರು. ಹುಝೂರ್ ಸಭಾಂಗಣಕ್ಕೆ ಪ್ರವೇಶಿಸುವ ಮೊದಲು ಪ್ರೀತಿಪೂರ್ವಕವಾಗಿ ಹಾರ್ಪಿಕ್ಯೂ ತಯಾರು ಮಾಡುವ ಒಬ್ಬ ಕಾರ್ಯಕರ್ತರ ಬಳಿಗೆ ತೆರಳಿ ಅವರಿಗೆ ಪ್ರೋತ್ಸಾಹ ನೀಡಿದರು. ಹಾಗೂ ಬಾರ್ಬಿಕ್ಯು ಮಾಡುವ ಕುರಿತು, ಮಸಾಲಗಳನ್ನು ತಯಾರು ಮಾಡುವ ವಿಧಾನಗಳ ಬಗ್ಗೆ ನಿರ್ದೇಶನ ನೀಡಿದರು.

**ಜಾಮಿಯಾ ವಿದ್ಯಾರ್ಥಿಗಳ ಜೊತೆ ಸಭೆ**

ಅನಂತರ ಹುಝೂರ್(ಅಬಿಅ) ಜಾಮಿಯಾ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಜಾಮಿಯಾ ಅಹ್ಮದಿಯಾ ವಿದ್ಯಾರ್ಥಿಗಳ ಜೊತೆ ಒಂದು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಆರಂಭವು ಖುರ್‌ಆನ್ ಪಠಣದೊಂದಿಗೆ ಆಯಿತು. ಅದು ಅಝೀಝುಂ ಹಾಫಿಝ್ ಇಹ್‌ತೆಶಾಮ್ ಅಹ್ಮದ್ ನೆರವೇರಿಸಿದರು. ಅನಂತರ ಅದರ ಉರ್ದು ಅನುವಾದ ಪ್ರಸ್ತುತಪಡಿಸಿದರು. ಹುಝೂರ್(ಅಬಿಅ) ಹಾಫಿಝ್ ಇಹ್‌ತೆಶಾಮ್‌ರೊಡನೆ ಕೇಳಿದರು. ಹಾಫಿಝ್ ಕೇವಲ ಹೆಸರಾಗಿದೆಯೋ ಅಥವಾ ಪವಿತ್ರ ಖುರ್‌ಆನ್ ಕಂಠಸ್ಥ (ಹಿಫ್ಝ್) ಮಾಡಿರುವಿರೊ. ತರಾವೀಹ್ ನಿರ್ವಹಿಸುವುದಿಲ್ಲವೇ. ಜರ್ಮನಿಯಲ್ಲಿ ಪೂರ್ಣ ಖುರ್‌ಆನ್ ಆಲಿಸುವವರು ಇಲ್ಲವಾದರೆ ನೀವು ಜಾಮಿಯಾದಲ್ಲಿಯೇ ತರಾವೀಹ್ ನಿರ್ವಹಿಸಿರಿ.

ಅನಂತರ ಅಝೀಝುಂ ತಫಾಖುರ್ ಅಹ್ಮದ್ ಹಝ್ರತ್ ರಸೂಲುಲ್ಲಾಹ್(ಸ) ಅವರ ಈ ಕೆಳಗೆ ನಮೂದಿತ ಹದೀಸನ್ನು ಪ್ರಸ್ತುತಪಡಿಸಿದರು.

ಹಝ್ರತ್ ಅಬೂ ದರ್ದಾ(ರ) ವರದಿ ಮಾಡುತ್ತಾರೆ. ನಾನು ಹಝ್ರತ್ ರಸೂಲುಲ್ಲಾಹ್(ಸ) ರನ್ನು ಹೀಗೆ ಹೇಳುವುದನ್ನು ಆಲಿಸಿದ್ದೇನೆ. ಯಾವ ವ್ಯಕ್ತಿಯು ವಿದ್ಯೆಗೋಸ್ಕರ ಹೊರಡುತ್ತಾನೋ ಅವನಿಗಾಗಿ ಅಲ್ಲಾಹನು ಸ್ವರ್ಗದ ಹಾದಿ ಸುಗಮಗೊಳಿಸುತ್ತಾನೆ ಮತ್ತು ಮಲಕುಗಳು (ದೇವದೂತರು) ವಿದ್ಯಾರ್ಥಿಯ ಈ ಕಾರ್ಯದ ಬಗ್ಗೆ ಸಂತುಷ್ಟರಾಗಿ ತನ್ನ ರೆಕ್ಕೆಗಳನ್ನು ಅವರ ಮುಂದೆ ಹಾಸುತ್ತಾರೆ ಮತ್ತು ವಿದ್ಯಾವಂತನಿಗಾಗಿ ಭವಿಷ್ಯದಲ್ಲಿ ಇರುವವರು ಅವರ ಪಾಪ ವಿಮೋಚನೆಗಾಗಿ ಪ್ರಾರ್ಥಿಸುತ್ತಾರೆ. ನೀರಿನಲ್ಲಿರುವ ಮೀನುಗಳು ಸಹ ಅವರ ಪರವಾಗಿ ಪ್ರಾರ್ಥಿಸುತ್ತವೆ. ಒಬ್ಬ ವಿದ್ಯಾವಂತನ (ಆಲಿಮ್) ಅನುಗ್ರಹ ಒಬ್ಬ ಆರಾಧನೆ ಮಾಡುವವನ (ಆಬಿದ್) ಮೇಲೆ, ನಕ್ಷತ್ರಗಳೊಡನೆ ಚಂದ್ರನಿಗೆ ಇರುವಂತಿದೆ. ಮತಪಂಡಿತರು (ಉಲಮಾರ್) ಪ್ರವಾದಿಗಳ ವಾರಸುದಾರರು. ಪ್ರವಾದಿಗಳು ಸಂಪತ್ತು, ರೂಪಾಯಿ, ನಾಣ್ಯಗಳ ಆಸ್ತಿ ಬಿಟ್ಟು ಹೋಗುವುದಿಲ್ಲ. ಬದಲಾಗಿ ಆಧ್ಯಾತ್ಮಿಕ ಜ್ಞಾನವೇ ಅವರ ಆಸ್ತಿಯಾಗಿರುತ್ತದೆ. ಯಾವ ವ್ಯಕ್ತಿ ವಿದ್ಯೆ ಪಡೆಯುವನೋ ಅವನು, ಪುಣ್ಯ, ಸತ್ಕರ್ಮಗಳ ಬಹು ದೊಡ್ಡ ಪಾಲು ಪಡೆಯುವವನಾಗುತ್ತಾನೆ.

ಅನಂತರ ಅಝೀಝುಂ ರಾನಾ ಶೀರಾಝ್ ಅವರು ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಕವನ: ಅಹದ್ ಶಿಕನಿ ನಾ ಕರೋ ಅಹ್ಲೆ ವಫಾ ಹೇಜಾವೋ (ಕೊಟ್ಟ ಮಾತು ತಪ್ಪದಿರಿ ನಿಷ್ಠಾವಂತರಾಗಿರಿ, ಶೈತಾನನ ಸಂತತಿ ಆಗದಿರಿ. ಅಲ್ಲಾಹನ ಭಕ್ತರಾಗಿರಿ). ಮಧುರ ಕಂಠದಿಂದ ಪ್ರಸ್ತುತಪಡಿಸಿದರು. ಅನಂತರ ಅಝೀಝುಂ ಮಹಝೂರ್ ಮುನೀರ್ 4ನೇ ವರ್ಗದ ವಿದ್ಯಾರ್ಥಿ ಹಝ್ರತ್ ಮಸೀಹ್ ಮೌಊದ್(ಅ) ಅಧ್ಯಾಪನೆ ಪ್ರಸ್ತುತಪಡಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಅರುಹಿದರು. ಇಹಲೋಕದ ಕೆಡುಕುಗಳನ್ನು ಸಂಪೂರ್ಣವಾಗಿ ತ್ಯಜಿಸಿ ತಮ್ಮ ಜೀವನವನ್ನು ಕೇವಲ ಧರ್ಮಸೇವೆಗಳಿಗಾಗಿ ಸಮರ್ಪಿಸುವ ಯುವಕರು ಜನ್ಮ ತಾಳಬೇಕು. ಧರ್ಮಕ್ಕಾಗಿ ಸ್ವಲ್ಪ ಸಮಯ ಬಾಕಿ ಇಹಲೋಕಕ್ಕಾಗಿ ಎಂಬಂತೆ ಇರಲಿಲ್ಲ. ಬದಲಾಗಿ ಅವರು ಧರ್ಮಮಾತ್ರಕ್ಕೆ ಸಮರ್ಪಿತರಾಗಿದ್ದರು. ತನ್ನ ಜೀವ, ಸಂಪತ್ತು ಎಲ್ಲವೂ ಇಸ್ಲಾಮ್ ಧರ್ಮಕ್ಕಾಗಿ ತ್ಯಾಗ ಮಾಡಿದರು. ಇಂತಹ ಮನುಷ್ಯರಾಗಬೇಕಾಗಿದೆ. ಈ ಸಂಘಟನೆಗೋಸ್ಕರ ಮುಬಲ್ಲಿಗ್‌ರಾಗಿ, ಉಪದೇಶಕರಾಗಿ ನಿಯುಕ್ತಿಗೊಳಿಸಬೇಕಾಗಿದೆ. ಅವರು ಮಿತವ್ಯಯಿ ಆಗಿರಬೇಕು. ಹಣ, ಸಂಪತ್ತಿನ ಚಿಂತೆ ಇರಬಾರದು. ಹಜ್‌ರತ್ ರಸೂಲುಲ್ಲಾಹ್(ಸ) ಯಾರಿಗೆ ತಬ್ಲೀಗ್ (ಪ್ರಚಾರ) ಗೋಸ್ಕರ ಕಳುಹಿಸಬೇಕಾದರೆ ಆದೇಶ ನೀಡುತ್ತಿದ್ದಂತೆಯೇ ಹೊರಡುತ್ತಿದ್ದರು. ಪ್ರಯಾಣ ದರವನ್ನು ಕೇಳುತ್ತಿರಲಿಲ್ಲ. ಮನೆಯ ಬಡತನದ ಬಗ್ಗೆ ಚಿಂತಿಸುತ್ತಿರಲಿಲ್ಲ. ಈ ಕಾರ್ಯ ತನ್ನ ಜೀವಿತವನ್ನು ಸಮರ್ಪಿಸುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಭಕ್ತಿಯುಳ್ಳವನಗೆ ಅಲ್ಲಾಹನು ಸ್ವಯಂ ತಾನು ಸಹಕಾರಿಯಾಗುತ್ತಾನೆ. ಅವನು ಅಲ್ಲಾಹನಿಗೋಸ್ಕರ ಕಠಿಣ ಜೀವನವನ್ನು ಸ್ವೀಕರಿಸುತ್ತಾನೆ. ಧರ್ಮ ಸೇವೆಗಾಗಿ ಸಮರ್ಪಿತನಾದವನನ್ನು ಅಲ್ಲಾಹನು ಪ್ರೀತಿಸುತ್ತಾನೆ. ನಾವು ಬಯಸುವುದೇನೆಂದರೆ ಕೆಲವು ಪುರುಷರನ್ನು ತಬ್ಲೀಗ್ ಕಾರ್ಯಗಳಿಗಾಗಿ ಆಯ್ದುಕೊಳ್ಳಬೇಕು. ಅವರು ಅದಕ್ಕಾಗಿಯೇ ಸಮರ್ಪಿತರಾಗಬೇಕು. ಬೇರೆ ಯಾವ ಉದ್ದೇಶವು ಹೊಂದಿರಬಾರದು. ಎಲ್ಲ ವಿಧಗಳ ಕಷ್ಟಗಳನ್ನು ಅನುಭವಿಸಿದರೂ ಹೋದ ಹೋದ ಕಡೆ ಅಲ್ಲಾಹನ ಸಂದೇಶ ತಲುಪಿಸಬೇಕು. ಸಹನೆ ಮತ್ತು ತಾಳ್ಮೆ ವಹಿಸುವವರಾಗಬೇಕು. ಆವೇಶ ತುಂಬಿರುವವರಾಗಬಾರದು. ಕಠಿಣವಾದ ವರ್ತನೆ ನೋಡಿ ಬೈಗುಳಗಳನ್ನು ಕೇಳಿಯೂ ನಮ್ರತೆಯಿಂದ ಉತ್ತರ ನೀಡುವ ಸಾಮರ್ಥ್ಯ ಹೊಂದಿದವರಾಗಬೇಕು. ಅಜ್ಞಾನತೆಯ ಭಯವಿದ್ದರೆ ಅಲ್ಲಿಂದ ದೂರ ಸರಿಯಬೇಕು. ಜಗಳ, ತಂಟೆ, ಗೊಂದಲಗಳಿಗೆ ಭಾಗಿಯಾಗಬಾರದು. ತಮ್ಮ ಮಾತುಗಳನ್ನು ಕೇಳುವಂತಹ ಸಜ್ಜನರು ಸಿಕ್ಕಿದರೆ ಅವರಿಗೆ ವಿನಯದಿಂದ ಮನವರಿಕೆ ಮಾಡಿಕೊಡಬೇಕು. ಚರ್ಚೆ ತಕರಾರುಗಳಿಂದ ದೂರ ಉಳಿಯಬೇಕು. ಏಕೆಂದರೆ ಅದರಿಂದ ಜಗಳದ ಭಯವಿರುತ್ತದೆ. ನಿಧಾನವಾಗಿ ಉತ್ತಮ ನಡತೆಯಿಂದ ತಮ್ಮ ಕಾರ್ಯ ಮುಂದುವರೆಸಿಕೊಂಡು ಹೋಗಬೇಕು. (ಬದರ್ 3 ಅಕ್ಟೋಬರ್ 1907)

ಅನಂತರ ಅಝೀಝುಂ ಸುಹೇಬ್ ನಾಸಿರ್ 6ನೇ ದರ್ಜೆ ವಿದ್ಯಾರ್ಥಿ "ಕಅಬ ಜೀವದರ್ಪಣೆಯ ಬುನಾದಿಯಾಗಿದೆ" ಶೀರ್ಷಿಕೆ ಮೇಲೆ ಭಾಷಣ ಮಾಡಿದರು.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನ ವಚನವಿದೆ. **ಇನ್ನ ಅವ್ವಲ ಬೈತಿನ್ ವುಝಿಅ ಲಿನ್ನಾಸಿ ಲಲ್ಲಝೀ ಬಿಬಕ್ಕತಿನ್ ಮುಬಾರಕ ವ್ವಹುದನ್ ಲಿಲ್‌ಆಲಮೀನ್** (ಆಲಿ–ಇಮ್ರಾನ್–97) ಸಕಲ ಮನುಷ್ಯರಿಗಾಗಿ ಸ್ಥಾಪಿಸಲ್ಪಟ್ಟ ಪ್ರಥಮ ಮಂದಿರ ಬಕ್ಕದಲ್ಲಿರುವುದೇ ಆಗಿದೆ. (ಅದು) ಅನುಗ್ರಹಿತವೂ ಸರ್ವ ಜನರಿಗೆ ಮಾರ್ಗದರ್ಶಕ (ಕೇಂದ್ರ) ವೂ ಆಗಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದರು. ಈ ಕಅಬವೂ ಆದಮ್(ಅ) ರವರ ಕಾಲದಿಂದಲೂ ಇದೆ. (ತಫ್ಸೀರ್ ಕಬೀರ್). ಆದುದರಿಂದ ಆದಿಯಿಂದಲೂ ಅಲ್ಲಾಹನು ಆದೇಶ ನೀಡಿರುವನು. ಪ್ರತಿ ವರ್ಷ ಭೂಮಿಯೆಲ್ಲೆಡೆಯಿಂದ ಏಕದೇವ ಆರಾಧಕರು ಇಲ್ಲಿ ಬಂದು ಸೇರಿ ಅದರ ಸುತ್ತು ಹೆಜ್ಜೆ ಅಥವಾ ಉಮ್ರಾಹ್ ನಡೆಸಬೇಕು. ಆ ಮೂಲಕ ಅಲ್ಲಾಹನ ಆದೇಶಗಳ ಪಾಲನೆಯ ಸವಿ ನೆನಪು ಜೀವಂತಗೊಳಿಸಬೇಕು. ಇಸ್ಲಾಮ್ ಧರ್ಮದಲ್ಲಿ "ಕಅಬಾ" ದ ಪ್ರಾಮುಖ್ಯತೆಯು ಅಂಗೀಕೃತವಾದ ಬುನಾದಿಯ ಸ್ಥಾನವನ್ನು ಹೊಂದಿದೆ. ಆ ಕಾರಣದಿಂದಲೇ ಪೈಗಂಬರರು(ಸ) ಪ್ರವಾದಿತ್ವಕ್ಕಿಂತ

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.